
ಅಚಲ



* ಎರಡು ಕವನಗಳು
* ದ್ರೋಹಿಯ ತಾಯಿ (ಗಾರ್ಕಿಯ ಕಥೆ)
* ಹೋರಾಟದ ಕಣದಲ್ಲಿ ಕಪ್ಪು ಮಹಿಳೆ
* ಪ್ರಗತಿಯ ಪ್ರತಿಬಿಂಬ- ವಿಯೆಟ್ನಾಂ ಮಹಿಳೆ
* ಚಿತ್ರೋದ್ಯಮದ ಗೋಮುಖವ್ಯಾಘ್ರಗಳು
* ಶಾಂತಿಗಾಗಿ ಹೋರಾಟ
* ಮಹಿಳೆ ಮತ್ತು ವಿದ್ಯಾಭ್ಯಾಸ

ಜುಲೈ 8, 1986 [illegible] ಮಹಿಳಾ ಅಧ್ಯಯನ ಕೇಂದ್ರ ಬೆಲೆ 1-50

ಸಂಪುಟ 1   ಸಂಚಿಕೆ 3

'ಅಚಲ'ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ.

ಎಂ.ಓ. ಮೂಲಕ ಚಂದಾ ಹಣ ಕಳುಹಿಸುವವರು ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು :

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೇನ್, ವ್ಯೈಯಾಳಿಕಾವಲ್
ಬೆಂಗಳೂರು–560 003

ಚಂದಾ ವಿವರ

ವಾರ್ಷಿಕ ಚಂದಾ : **10 ರೂ.**

ಬಿಡಿ ಪ್ರತಿ : **1–50 ರೂ.**

ವಿಶೇಷ ಪ್ರತಿ : **2–50 ರೂ.**

Printed at ILA Printers, 153, 4th Main, 8th cross, Chamarajapet, Bangalore-18 and published by Dr. G. Ramakrishna on behalf of Jagruthi Mahila Adhyayana Kendra, 221, IV Main, Vyalikaval, BANGALORE-3

Editor : N. Gayathri

'ಅಚಲ'ದಲ್ಲಿ ಪ್ರಕಟವಾಗುವ ಲೇಖನಗಳು ನಿಮ್ಮನ್ನು ಚರ್ಚೆಗೆ ಆಹ್ವಾನಿಸುವುದಕ್ಕಾಗಿ, ನೀವು ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗಿ. ಲೇಖಕರ ಅಭಿಪ್ರಾಯಗಳು ಪತ್ರಿಕೆಯ ಅಭಿಪ್ರಾಯಗಳೂ ಆಗಿರಬೇಕೆಂಬುದಿಲ್ಲ.

* * *

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಕಲ್ಪನೆ ಮತ್ತು ವಾಸ್ತವತೆ' ಲೇಖನದ ಮುನ್ನುಡಿಯಲ್ಲಿ ಸಿಮೋನ್ ದ ಬೋವ್ವಾರ್‌ರವರು ಫೆಬ್ರುವರಿ 1986ರಲ್ಲಿ ನಿಧನರಾದರೆಂದು ತಪ್ಪಾಗಿ ಪ್ರಕಟವಾಗಿದೆ. ಇದು ಏಪ್ರಿಲ್ 1986ರಲ್ಲಿ ಎಂದಿರಬೇಕಿತ್ತು.

* * *

ಸಣ್ಣ ಕಥೆಗಳ ಪಿತಾಮಹ, ಕನ್ನಡದ ಆಸ್ತಿ ಮಾಸ್ತಿಯವರು ನಮ್ಮನ್ನಗಲಿದ್ದಾರೆ. ಖ್ಯಾತ ಲೇಖಕಿ ಗೀತಾ ಕುಲಕರ್ಣಿಯವರು ಇಂದು ನಮ್ಮೊಡನಿಲ್ಲ. ಇವರಿಬ್ಬರ ನಿಧನಕ್ಕೂ 'ಅಚಲ' ದುಃಖ ವ್ಯಕ್ತಪಡಿಸುತ್ತದೆ; ಅವರಿಗೆ ಗೌರವ ಸೂಚಿಸುತ್ತದೆ.

* * *

ಸಂವಾದ

ಮಹಿಳಾ ಸ್ವಾತಂತ್ರ್ಯ, ಸಮಾನತೆಯ ಬಗೆಗೆ ಹಲವಾರು ಅಭಿಪ್ರಾಯಗಳು, ಪರಿಕಲ್ಪನೆಗಳು ನಮ್ಮ ಸುತ್ತಮುತ್ತ ಕೇಳಿ ಬರುತ್ತಿರುತ್ತವೆ. ಈ ವಿಷಯವನ್ನು ಕುರಿತಂತೆ ಓದುಗರ ಅಭಿಪ್ರಾಯವನ್ನು 'ಅಚಲ' ಆಹ್ವಾನಿಸುತ್ತದೆ. ದಯವಿಟ್ಟು ಈ ಚರ್ಚೆಯಲ್ಲಿ ಭಾಗವಹಿಸಿ.

ಪ್ರಿಯಸಂಗಾತಿ,

"ಶಾಂತಿಯು ಇಡೀ ಮಾನವ ಜನಾಂಗದ ಹೊಣೆ. ಯಾರೊಬ್ಬನೇ ಆಗಲಿ, ಯಾವುದೇ ಒಂದು ರಾಷ್ಟ್ರವಾಗಲೀ ಯುದ್ಧವನ್ನು ತಡೆಗಟ್ಟಿ ಶಾಂತಿಯನ್ನು ರಕ್ಷಿಸಲು ಸ್ವಯಂ ಶಕ್ತರಾಗಿರುವುದಿಲ್ಲ. ಅದನ್ನು ನಿರ್ವಹಿಸಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸ ಬೇಕಾಗುತ್ತದೆ". ಮೂವತ್ತೇಳು ವರ್ಷಗಳ ಹಿಂದೆ ಜಾಗತಿಕ ಶಾಂತಿ ಸಮಿತಿಯ ಪ್ರಥಮಾಧ್ಯಕ್ಷ ಜೋಲಿಯೋ ಕ್ಯೂರಿ ನುಡಿದ ಈ ಮಾತುಗಳು ಇಂದಿಗೂ ಸತ್ಯವಾಗಿವೆ ; ಸಕಾಲಿಕವಾಗಿವೆ. ಮಾನವಕುಲದ ಅರ್ಧ ಭಾಗವಾದ ಮಹಿಳೆಯರ ಪಾತ್ರ ಈ ಶಾಂತಿ ರಕ್ಷಣೆಯ ಸಂದರ್ಭದಲ್ಲಿ ಎಷ್ಟೊಂದು ಗಣನೀಯವಾದುದು ಎಂಬುದನ್ನು ಬೇರೆ ಒತ್ತಿ ಹೇಳಬೇಕಿಲ್ಲ.

'ಜಾಗತಿಕ ಶಾಂತಿ' ಯೆನ್ನುವುದು ಒಂದು ನೇತ್ಯಾತ್ಮಕವಾದ ಪರಿಕಲ್ಪನೆಯಲ್ಲ. ಯುದ್ಧವಿಲ್ಲದಿರುವಿಕೆಯಷ್ಟೇ ಶಾಂತಿಯಲ್ಲ. 'ನಿಶ್ಶಸ್ತ್ರೀಕರಣ' ಜಾಗತಿಕ ಶಾಂತಿಯ ಒಂದು ಬಹು ಮುಖ್ಯ ಅಂಶವಾದರೂ, ಜಾಗತಿಕ ಶಾಂತಿಯು ಕೊನೆಗೆ ಮಾನವನ ಸರ್ವತೋಮುಖ ಏಳಿಗೆಗೆ ದಾರಿ ಮಾಡಿ ಮಾನವನ ಅಭ್ಯುದಯವನ್ನು ಸಾಧಿಸಬೇಕು. ಅಲಿಪ್ತ ಚಳುವಳಿ ಯನ್ನು ಬೆಂಬಲಿಸುವುದು, ನೂತನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗಾಗಿ ಸೆಣಸುವುದು, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ರಾಷ್ಟ್ರಗಳ ಆಕಾಂಕ್ಷೆಗಳನ್ನು ಎತ್ತಿ ಹಿಡಿಯುವುದು– ಇವೂ ಕೂಡ 'ಜಾಗತಿಕ ಶಾಂತಿ'ಯ ಸಾಧನೆಯಲ್ಲಿನ ವಿವಿಧ ಕಾರ್ಯಕ್ರಮಗಳು.

ಆಫ್ರಿಕಾ, ಪಶ್ಚಿಮ ಏಷ್ಯ, ಹಿಂದೂ ಮಹಾಸಾಗರದ ಪ್ರದೇಶಗಳು, ದೂರ ಪ್ರಾಚ್ಯ ರಾಷ್ಟ್ರಗಳು, ದಕ್ಷಿಣ ಅಮೇರಿಕಾ ಮತ್ತು ಕೆರೇಬಿಯನ್ ರಾಷ್ಟ್ರಗಳನ್ನು ಅಣ್ವಸ್ತ್ರರಹಿತ ಪ್ರದೇಶಗಳನ್ನಾಗಿಸುವುದು ಹಾಗೂ ವಿದೇಶಿ ಮಿಲಿಟರಿ ನೆಲೆಗಳನ್ನೂ, ಬಣಗಳನ್ನೂ ಆ ಪ್ರದೇಶಗಳಿಂದ ಉಚ್ಚಾಟಿಸುವುದು, ಏಷ್ಯ, ಆಗ್ನೇಯ ಏಷ್ಯ ಮತ್ತು ಮೆಡಿಟರೇನಿಯನ್ ಪ್ರದೇಶಗಳನ್ನು ಶಾಂತಿ ಸಹಕಾರದ ಪ್ರದೇಶಗಳನ್ನಾಗಿ ಮಾರ್ಪಡಿಸುವುದು–ಈಗ ಅತ್ಯಂತ ಜರೂರಾಗಿ ಆಗಬೇಕಾಗಿರುವ ಕಾರ್ಯಗಳು. ಬ್ರಿಟನ್ನಿನ ಕ್ರೂಯಿಜ್ ಅಣ್ವಸ್ತ್ರಗಳ ಪ್ರಮುಖ ತಾಣವಾದ ಗ್ರೀನ್‌ಹ್ಯಾಂನಲ್ಲಿ ವಿಶ್ವದ ಹಲವಾರು ಮಹಿಳೆಯರು ಬಂದು ಅಣ್ವಸ್ತ್ರ ಗಳ ಸ್ಥಾಪನೆಯನ್ನು ಪ್ರತಿಭಟಿಸಿ ಧರಣಿ ಕೂತಿದ್ದಾರೆ. ಕಳೆದ ಐದು ವರ್ಷಗಳಿಂದ ಸತತ ವಾಗಿ ತಮ್ಮ ಪ್ರತಿಭಟನೆಯನ್ನು ಸೂಚಿಸುತ್ತಾ ಶಾಂತಿ ಶಿಬಿರವೊಂದನ್ನು ರಚಿಸಿಕೊಂಡು ಇಲ್ಲಿ ಧರಣಿ ಕೂತಿರುವ ಈ ಮಹಿಳೆಯರು ಬ್ರಿಟನ್ನಿನ ಕಾನೂನಿನ ದೃಷ್ಟಿಯಿಂದ ಅಪರಾಧಿ ಗಳು. ಅತಿಕ್ರಮ ಪ್ರವೇಶದ ಅಪರಾಧ ಹೊತ್ತು ಇಲ್ಲಿ 2000ಕ್ಕೂ ಹೆಚ್ಚು ಮಹಿಳೆಯರು ದಸ್ತಗಿರಿಯಾಗಿದ್ದಾರೆ. ಯುರೋಪ್ ಖಂಡದಲ್ಲಿ ಅಮೇರಿಕೆಯು ಇರಿಸಿರುವ ಶಸ್ತ್ರಾಸ್ತ್ರಗಳ ವಿರುದ್ಧದ ಹೋರಾಟಗಳಲ್ಲಿ ಈ ಚಳುವಳಿಯು ಅಸ್ತಿತ್ವಕ್ಕೆ ಬಂದಿದೆಯಾದರೂ, ಉಳಿದ ಹಲವಾರು ರಾಷ್ಟ್ರಗಳಲ್ಲಿ ಅಲ್ಲಿನ ಮಹಿಳೆಯರು ಅಲ್ಲಿನ ಅಗತ್ಯಗಳಿಗನುಗುಣವಾಗಿ ತಮ್ಮ ಚಳುವಳಿಯನ್ನು ಮುಂದುವರಿಸಿದ್ದಾರೆ.

ತಮ್ಮ ತಾಯ್ನಾಡಿಗಾಗಿ, ತಮ್ಮ ನಾಡಿನ ವಿಮೋಚನೆಗಾಗಿ ಹೋರಾಟ ನಡೆಸಿರುವ ದಕ್ಷಿಣ ಆಫ್ರಿಕಾ, ನಮೀಬಿಯಾ, ಪ್ಯಾಲೆಸ್ಟೈನ್ ರಾಷ್ಟ್ರಗಳ ವಿಮೋಚನಾ ತಂಡಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಆ ಚಳುವಳಿಗಳನ್ನು ಬಲಪಡಿಸಿವೆ ಮತ್ತು ತನ್ಮೂಲಕ ಮಹಿಳೆಯರ ವಿಮೋಚನೆಗೆ ದಿಕ್ಸೂಚಿಯಾಗಿವೆ. 'ಮಹಿಳೆಯರ ವಿಮೋಚನೆ ಇಲ್ಲದೆ ರಾಷ್ಟ್ರೀಯ ವಿಮೋಚನೆ ಇಲ್ಲ, ರಾಷ್ಟ್ರೀಯ ವಿಮೋಚನೆಯಿಲ್ಲದೆ ಮಹಿಳೆಯರ ವಿಮೋಚನೆ

ಇಲ್ಲ' ಎಂಬುದನ್ನು ತತ್ಕ್ಷಣ ಒಪ್ಪಿಕೊಂಡಿರುವ ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಪ್ರಿಯರು ಬಿಳಿ ಸರ್ಕಾರದ ವರ್ಣಭೇದ ನೀತಿಯ ವಿರುದ್ಧ ಸಮರವನ್ನೇ ಸಾರಿದ್ದಾರೆ. ಶಸ್ತ್ರಾಸ್ತ್ರ ಸಂಗ್ರಹಣೆಯು ವಿಪುಲವಾಗಿ ವಿಸ್ತಾರಗೊಳ್ಳುತ್ತಿರುವ ಸದ್ಯದ ಪರಿಸ್ಥಿತಿಯಲ್ಲಿ ಅದರಿಂದ ಹೊಮ್ಮುವ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಮೂಡುತ್ತಿದ್ದು ವಿಶ್ವದ ಎಲ್ಲೆಡೆಯಲ್ಲೂ ನಡೆಯುತ್ತಿರುವ ಬೃಹತ್ ಶಾಂತಿ ಪ್ರದರ್ಶನಗಳಲ್ಲಿ ಮಹಿಳೆಯರು ತಮ್ಮ ಕರ್ತವ್ಯವನ್ನು ನೆರವೇರಿಸಲು ಹಿಂದೆ ಬಿದ್ದಿಲ್ಲ.

ರಾಷ್ಟ್ರೀಯ ಆಂದೋಲನಗಳಲ್ಲಿನ ಮಹಿಳೆಯರ ಭಾಗವಹಿಸುವಿಕೆಯಿಂದಾಗಿ ಪುರುಷರ ದಬ್ಬಾಳಿಕೆಯನ್ನು ಪ್ರತಿಭಟಿಸುವ ಅವರ ಧ್ವನಿಯನ್ನು ಕ್ಷೀಣವಾಗಿಸುತ್ತದೆ–ಎಂಬ ಸ್ತ್ರೀತ್ವವಾದಿಗಳ ವಾದ ಹುರುಳಿಲ್ಲದ್ದು. ರಾಷ್ಟ್ರೀಯ ಆಂದೋಲನಗಳಲ್ಲಿ ಭಾಗವಹಿಸುತ್ತಿರುವ ದಕ್ಷಿಣ ಆಫ್ರಿಕಾ, ನಮೀಬಿಯಾ, ಪ್ಯಾಲೆಸ್ಟೈನ್ ಮುಂತಾದ ಅಭಿವೃದ್ಧಿಶೀಲ ರಾಷ್ಟ್ರಗಳ ಮಹಿಳೆಯರ ಹೋರಾಟದ ಆಯ್ಕೆಯನ್ನು ಪ್ರಶ್ನಿಸುವ ಸ್ತ್ರೀತ್ವವಾದಿಗಳು ಒಂದು ಅಂಶವನ್ನು ಗಮನಿಸಬೇಕು: ರಾಷ್ಟ್ರೀಯ ವಿಮೋಚನೆಯು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಅಗತ್ಯವಾಗಿರುವಾಗ ಮಹಿಳೆಯಾಗಲೀ, ಮಹಿಳಾ ಹೋರಾಟವಾಗಲೀ ಇದರಿಂದ ಹೊರತಾಗುವುದಿಲ್ಲ. ಈ ಸಂದರ್ಭದಲ್ಲಿ ಚಿಲಿಯ ಮಾಜಿ ಅಧ್ಯಕ್ಷ ಅಲೆಂಡೆಯವರ ಮಾತು ನೆನಪಾಗುತ್ತದೆ : 'ಚಿಲಿಯ ಸಂದರ್ಭದಲ್ಲಿ 'ಶಾಂತಿ'ಯೆಂದರೆ ತಾಮ್ರದ ಗಣಿಗಳ ಒಡೆತನ'. ಚಿಲಿಯ ಶಾಂತಿಯನ್ನು ಬಯಸುವ ಎಲ್ಲ ಪ್ರಜೆಗಳೂ ಅದರ ದೇಶದ ತಾಮ್ರದ ಗಣಿಗಳ ಒಡೆತನ ಹೊಂದಿದ್ದ ಅಮೇರಿಕನ್ನರ ವಿರುದ್ಧ ಹೋರಾಡಬೇಕೆಂಬ ಸತ್ಯವನ್ನು ಜನತೆಗೆ ಮನವರಿಕೆ ಮಾಡಿಕೊಟ್ಟಿದ್ದರು. ಅದರಂತೆ ಇತ್ತೀಚೆಗೆ ನೈರೋಬಿಯಾದಲ್ಲಿ ನಡೆದ ವಿಶ್ವ ಮಹಿಳಾ ಸಮ್ಮೇಳನದಲ್ಲಿ 'ಮಹಿಳಾ ಸಮಾನತೆ' ಕುರಿತು ಮಾತನಾಡುತ್ತಾ, ಹತ್ಯೆಗೀಡಾದ ಅಲೆಂಡೆಯವರ ಪತ್ನಿ, "ಮಹಿಳೆಗೆ ಸಮಾನತೆ ಬೇಕೇ ? ಮೊದಲು ಅವರು ಆರ್ಥಿಕ ಶೋಷಣೆ. ಮಿಲಿಟರಿ ಆಳ್ವಿಕೆ ಮತ್ತು ಶಸ್ತ್ರಾಸ್ತ್ರ ಜಮಾವಣೆ ನಿಲ್ಲಿಸಲು ಶ್ರಮಿಸಬೇಕು" ಎಂದರು.

ಇಂದು ನಮ್ಮ ರಾಷ್ಟ್ರದಲ್ಲೂ ರಾಷ್ಟ್ರದ ಐಕ್ಯತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆಯುಂಟಾಗುವಂತಹ ಚಿಂತಾಜನಕ ಪರಿಸ್ಥಿತಿಯುಂಟಾಗಿ ದಿನದಿನಕ್ಕೂ ಗಾಭರಿ ಹುಟ್ಟಿಸಿ ಶಾಂತಿಯನ್ನು ಕದಡುತ್ತಿದೆ. ಭಾಷೆ, ಜಾತಿ, ಮತೀಯ ಕಾರಣಕ್ಕಾಗಿ, ವಿದೇಶೀ ಶಕ್ತಿಗಳ ಕೈವಾಡದಿಂದಾಗಿ ರಾಷ್ಟ್ರದ ಐಕ್ಯತೆಗೆ ತೊಂದರೆಯುಂಟಾಗಿದೆ. ಅಷ್ಟೇ ಅಲ್ಲ, ಶೈಕ್ಷಣಿಕ ಮತ್ತು ವೈದ್ಯಕೀಯ ಸೌಲಭ್ಯಗಳಿಗಾಗಿ ಹಾಗೂ ಉದ್ಯೋಗ ಮತ್ತು ಸಾಮಾಜಿಕ ಪ್ರಗತಿಯ ಹೆಚ್ಚಳಕ್ಕಾಗಿ ತೊಡಗಿಸಬೇಕಾದ ಹಣ ಕ್ರಮೇಣ ಕಡಿಮೆಯಾಗುತ್ತಿರುವುದು ಶಸ್ತ್ರಾಸ್ತ್ರ ಪೈಪೋಟಿಯ ಮಾರಕ ಪರಿಣಾಮವಲ್ಲದೆ ಮತ್ತೇನೂ ಅಲ್ಲ, ಎಂಬುದನ್ನು ಮನಗಾಣಬೇಕಿದೆ. ನಮ್ಮ ಸಾಮಾಜಿಕ, ಆರ್ಥಿಕ ಮತ್ತು ವೈಜ್ಞಾನಿಕ ಬೆಳವಣಿಗೆ, ನೂತನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ರಚನೆ, ಅನಕ್ಷರತೆ, ದಾರಿದ್ರ್ಯ, ಹಸಿವು–ರೋಗರುಜಿನಗಳು, ಇತ್ಯಾದಿಗಳ ನಿರ್ಮೂಲನ–ಇವನ್ನೆಲ್ಲಾ ಶಸ್ತ್ರಾಸ್ತ್ರ ಪೈಪೋಟಿ, ಅವುಗಳ ಸಂಗ್ರಹಣೆ, ಆಕ್ರಮಣ ಮತ್ತು ಹಸ್ತಕ್ಷೇಪಗಳನ್ನು ನಿರ್ಮೂಲನಗೊಳಿಸದೆ ಸಾಧಿಸುವುದು ಸರ್ವಥಾ ಸಾಧ್ಯವಿಲ್ಲ. ಆದ್ದರಿಂದ ಅಂತರರಾಷ್ಟ್ರೀಯ ಶಾಂತಿಗಾಗಿ ಮೀಸಲಾದ ಈ ವರ್ಷದಲ್ಲಿ ಎಲ್ಲ ರೀತಿಯ ಮನುಷ್ಯ ಪ್ರಯತ್ನಗಳನ್ನು ಕೇಂದ್ರೀಕರಿಸಿ ದೃಢ ಸಂಕಲ್ಪದಿಂದ ಜಾಗತಿಕ ಶಾಂತಿಗಾಗಿ ಹೋರಾಡುವ ದೀಕ್ಷೆ ತೊಡೋಣ.

ಎನ್. ಗಾಯತ್ರಿ

ಕವನ

ಬಂಧನದಲ್ಲಿರುವೆ

ನಾನು ಬಂಧಿಯಾಗಿರುವೆ, ಹಲುಬುತ್ತ ಕೊರಗುತ್ತ
ಸಾವಿಗಾಗಿ ಪ್ರಾರ್ಥಿಸುವೆ, ಸಾವಿಗಾಗಿ ಮಾತ್ರ,
ಇಷ್ಟಾದರೂ ಯಾತನೆಯಿಂದ ನೆನೆಸಿಕೊಳ್ಳುವೆ :
ಟ್ವಾರ್‌ನ ಬಂಜರು ನೆಲವನ್ನು, ಹತಾಶ ಆಕಾಶವನ್ನು,
ಬತ್ತಿ ಹೋದ ಪುರಾತನ ಬಾವಿ, ನೆತ್ತಿಯ ಮೇಲೆ
ಹೆಪ್ಪುಗಟ್ಟಿದ ಮಂಜಿನ ಮೋಡಗಳು
ಕಿರುಗುಟ್ಟುತ್ತ ಮೆಲ್ಲನೆ ತೆರೆದುಕೊಳ್ಳುವ ಗೇಟು
ದುಃಖ ಮತ್ತು ರೊಟ್ಟಿಯ ವಾಸನೆಯನ್ನು
ಮತ್ತು ಅಂಡಲೆಯುವ ಗಾಳಿ, ಸದ್ದಿಲ್ಲದ
ಕುಗ್ಗಿದ ದನಿ ಆಕ್ರಮಿಸುವ ಆ ಕಳೆಗುಂದಿದ ವಿಸ್ತಾರಗಳು
ಬಿಸಿಲಿಗೆ ಕಪ್ಪಾದ ಸೌಮ್ಯ ಹೆಂಡತಿಯರ
ಮತ್ತು ತರುಣಿಯರ ಅಸಮ್ಮತಿಯ ನೋಟಗಳನ್ನೂ.

-ಅನ್ನಾ ಅಖ್‌ಮತೋವ್

ಕನ್ನಡಕ್ಕೆ: **ಶಾಂತ ಬಿ. ಎನ್.**

ತಾಯಿಯ ಅಳಲು

ಎಲೆ ಕಂದಮ್ಮ, ನನ ಮುದ್ದೇ, ಹುಟ್ಟಿನಲಿ ಎಲ್ಲರಿಗೂ ಸಮ ನೀನು.
ನನ್ನೆದೆ ಹಾಲ ನೀ ಕುಡಿವಾಗ ಮರಗಟ್ಟುವುದು ರಕ್ತ
ಕಾಡುತ್ತದೆ ಚಿಂತೆಯೊಂದು : ನಿನ್ನ ಭವಿಷ್ಯದ ಮುಂದೊಂದು ದಿನ
ಕೊಲ್ಲಲೋ, ಕೊಲೆಗೆ ಈಡಾಗಲೋ ನಿನ್ನನ್ನು ಆಳರಸ ಕಳಿಸುವನೋ ಎಂದು.
ಯುದ್ಧ ಭೂಮಿಯಲ್ಲಿ ದಿನವೂ ಉದುರಿಬೀಳುವ ಸಾವಿರಾರು ಜೀವಗಳಲ್ಲಿ
ನಿನ್ನಂತೆ ತಮ್ಮ ತಾಯಿಯ ಕಾತುರದ ಪ್ರೀತಿ ಪ್ರೇಮದ ಭಾದ್ಯರೆ ಎಲ್ಲಾ.
ತಾಯ ಮಮತೆಯ ತೋಳ ಬಳ್ಳಿಗಳು, ತೊಡೆಯ ಮೇಲಾಡುವ ಗಿಣಿಗಳು.
ನಿನಗುಂಟು ನೂರು ದೊರೆಗಳಿಗಿಂತ ಹೆಚ್ಚು ಬೆಲೆ.
ಓಹ್ ಭಯಂಕರ ಯೋಚನೆಯೆ ! ನೀ ಬೆಳೆದು ಯುವಕನಾಗುವ ಮುನ್ನ
ಎಲ್ಲ ಸಮರಗಳು ನಿಲ್ಲಲಿ. ಉಳಿದ ಪೀಡಕರು
ಬೇಕಿದ್ದರೆ ಅವರ ಯುದ್ಧ ಅವರೇ ಕಾದಲಿ, ಸುಭದ್ರತೆ ನೆಲೆಸಲಿ.
ಸಮಾನ ಹಕ್ಕು, ಸಮಾನ ಕಾನೂನು
ಪ್ರತಿಯೊಬ್ಬರಿಗೂ ಸುಲಭವಾಗಿ ದಕ್ಕಲಿ.
ಅಂತೆ, ಯಾವ ಮಾತೆಯ ಮಮತೆಯ ಕುಡಿಯೂ ಬೀದಿ ಪಾಲಾಗದಿರಲಿ.
ಬಾಳು ಕಾಣುವ ಜೀವಗಳು ಮೃತ್ಯುಕೂಪಕೆ ಬಗೆಯದಿರಲಿ.

ಥಾಮಸ್ 'ಕ್ಲಿಯೊ ರಿಕ್‌ಮನ್

ಕನ್ನಡಕ್ಕೆ : ಎನ್. ಗಾಯತ್ರಿ

ಮ್ಯಾಕ್ಸಿಂ ಗಾರ್ಕಿಯ ಕಥೆ

ದ್ರೋಹಿಯ ತಾಯಿ

ಶತ್ರು ಉಕ್ಕಿನ ಹಿಡಿತದಲ್ಲಿ ನಗರವ ಸುತ್ತುಗಟ್ಟಿ ವಾರಗಳೇ ಕಳೆದಿತ್ತು. ರಾತ್ರಿ ಹೊತ್ತಿಸುವ ಬೆಂಕಿ 'ಸುತ್ತುಗೋಡೆ'ಯ ಸಂದಿನಿಂದ ಕಪ್ಪು ಕತ್ತಲೆಯಲ್ಲಿ ಕೆಂಡದುಂಡೆಯ ಕಣ್ಣುಗಳಾಗಿ ಇಣುಕುತ್ತಿತ್ತು. ಮುತ್ತಿಗೆ ಹಾಕಿದ ನಗರದಲ್ಲಿ ವಿಪತ್ತಿನ ಶಾಖ, ವಿಷಣ್ಣ ಚಿಂತೆಗಳ ಕುದಿಸಿತ್ತು.

ಜನ ನೋಡಿದರು—ಗೋಡೆಯಾಚೆ ಶತ್ರುವಿನ ಕುಣಿಕೆ ಬಿಗಿಯುತ್ತಿದೆ. ಬೆಂಕಿಯ ಸುತ್ತ ಕಪ್ಪು ನೆರಳುಗಳು, ಕೊಬ್ಬಿದ ಕುದುರೆಗಳ ಕೆನೆತ, ಹಸಿದ ಆಯುಧಗಳ ಕಿಣಿ ಕಿಣಿ ನಾದ, ವಿಜಯದ ವಿಶ್ವಾಸದಲ್ಲಿ ಪುಟಿದೆದ್ದ ಅರ್ಭಟದ ನಗು, ಹಾಡು ! ಹಗೆಯ ನಗೆ ಕಿವಿಗೆ ಕಾದ ಸೀಸವಾಗಿತ್ತು. ಶತ್ರು ನಾಲ್ಕೂ ದಿಕ್ಕಿನಿಂದ ಮುತ್ತಿದ್ದ. ನಗರ ಬೆತ್ತಲಾಗಿ ತೆರೆದು ನಿಂತಿತ್ತು, ಹಗೆಯ ಆಕ್ರಮಣಕ್ಕೆ.

ಕಾಳಗದಲ್ಲಿ ಬೇಸತ್ತ, ಅರೆ-ಹಸಿದ ಯೋಧರು ಕಿರುರಸ್ತೆಗಳ ತುಂಬ ನಡೆದಾಡಿದರು. ಎಲ್ಲೆಲ್ಲೂ ನೋವಿನ ಕರೆ, ಹೆಂಗಸರ ಬಿಸುದನಿಯ ಪ್ರಾರ್ಥನೆ, ಮಕ್ಕಳ ಕೀರುಗಂಟಲು, ಕೇಳಿಬರುತ್ತಿತ್ತು. ಭಯದ ಕಂಪನದಲ್ಲಿ ಒಂದೇ ಪ್ರಶ್ನೆ-ಶತ್ರು ಮುಂದುವರೆಯುತ್ತಿರುವನೆ ? ನಿಶೆಯ ನೀರವತೆಯಲ್ಲಿ ನೋವಿನ ನಿಟ್ಟುಸಿರು. ಎದೆಯ ಭೀತಿಯ ಬಡಿತ ಎಷ್ಟು ಸ್ಪಷ್ಟವಾಗಿ ಕೇಳುತ್ತದೆ. ದೂರದ ಬೆಟ್ಟಗಳ ಸಂದುಗಳಿಂದ ಕಪ್ಪು ನೆರಳುಗಳು ಗೋಪ್ಯವಾಗಿ ಅರೆಮುರಿದ ಗೋಡೆಯಾಚೆ ಸುಳಿದಾಡುತ್ತಿವೆ. ಬೆಟ್ಟಗಳ ತುದಿಯಿಂದ ಮೇಲೆದ್ದ ಚಂದ್ರ, ಕತ್ತಿ ಹೊಡೆತಕ್ಕೆ ಲಬುಕಿಹೋದ ಗುರಾಣಿಯಂತೆ ಕಾಣುತ್ತಿದಾನೆ. ಎಲ್ಲೆಲ್ಲೂ ಮೃತ್ಯುವಿನ ಕದಂಬ ಬಾಹು ಬಿಗಿಗೊಳ್ಳುತ್ತಿದೆ.

ಮನೆಗಳಲ್ಲಿ ಬತ್ತಿ ಹೊತ್ತಿಸಲೂ ಭಯ. ಹಾದಿಗಳಲ್ಲಿ ಹೆಪ್ಪುಗಟ್ಟಿದ ದಿಟ್ಟ ಕತ್ತಲಲ್ಲಿ, ಕಪ್ಪು ವಸ್ತ್ರದ ಒಂದು ಹೆಣ್ಣು ನಿಶ್ಶಬ್ದವಾಗಿ ನಡೆದಳು. ಅವಳ ನೋಡಿದೊಡನೆ ಜನ ತಲೆತಗ್ಗಿಸಿ, ಸರಬರ ಒಳ ನಡೆದರು.-

"ಅವಳೇ ಏನು ?"

"ಹೌದು ಅವಳೇ !" ಶಸ್ತ್ರಧಾರಿ ಯೋಧರೂ ಜಿಗುಪ್ಸೆಯಿಂದ ಮುಖ ತಿರುಗಿಸಿ ನಡೆದರು. ನಗರಕ್ಕೆ ಕವುಚಿ ನಿಂತ ಕಪ್ಪು ನೀರವತೆಯಂತೇ ಇತ್ತು, ಅವಳ ಭಾರದ ನಡಿಗೆ. ಜನರ ನೋವಿನ ದನಿ ಅವಳ ಕಿವಿಗೆ ತಮ್ಮಟೆಯಾಗಿತ್ತು.

ಓರ್ವ ಪ್ರಜೆಯಾಗಿ ತಾಯಿಯಾಗಿ ಆಕೆ ಮಗನ ಬಗ್ಗೆ, ನಾಡಿನ ಬಗ್ಗೆ ಯೋಚಿಸಿದಳು. ನಗರವನ್ನು ಧ್ವಂಸಗೊಳಿಸುತ್ತಿರುವ ಸೇನೆಯ ಮುಖಂಡ ಅವಳ ಮಗ, ಸುಂದರ ಮಗ......ಹೃದಯ ಹೀನ ಮಗ. ನೆನ್ನೆ ಮೊನ್ನೆಯಷ್ಟೆ ಮಗನನ್ನು ಹೆಮ್ಮೆಯಿಂದ ನೋಡಿದ್ದಳಲ್ಲವೆ ? ನಾಡಿಗೆ ತಾ ನೀಡಿದ ಅಮೂಲ್ಯ ಕಾಣಿಕೆಯೆಂದು ಬೀಗಿದ್ದಳು. ತಾ ಹುಟ್ಟಿದ ನೆಲದಲ್ಲಿ ಮಗ ಜನಿಸಿದ್ದ, ಬೆಳೆದಿದ್ದ. ತಾತ-ಮುತ್ತಾತರು ಕಟ್ಟಿ ಬೆಳೆಸಿದ ನಗರಕ್ಕೆ, ನೆಲದಡಿಯಲ್ಲಿ ಮಲಗಿದ್ದ ರಕ್ತ-ಸಂಬಂಧಿಗಳಿಗೆ, ಈ ನೆಲದ ಕತೆಗಳಿಗೆ, ಜನರ ಭರವಸೆಗಳಿಗೆ, ನಾಳೆಯ ಕನಸುಗಳಿಗೆ ಅವಳ ಹೃದಯದ ಎಳೆ ಎಳೆಗಳೂ ಬಿಗಿದು ಕಟ್ಟಿದ್ದವು. ಮನದಲ್ಲೇ ತೂಗಿದಳು-ಮಗನ ಮೇಲಿನ ಪ್ರೀತಿಯನ್ನು, ಮಾತೃಭೂಮಿಯ ಮಮತೆಯನ್ನು ಯಾವುದು ಹೆಚ್ಚೆಂದು ನಿರ್ಧರಿಸಲಾರದೆ ಕುಸಿದಳು.

ಸಂಗ್ರಹಾನುವಾದ :
ನೇಮಿಚಂದ್ರ

ಹೀಗೇ ರಾತ್ರಿಯ ರಸ್ತೆಗಳಲ್ಲಿ ಸುತ್ತಾಡಿದಳು. ಕಪ್ಪು ವಸ್ತ್ರದಲ್ಲಿ ಮೃತ್ಯು ದೇವತೆಯಂತೆ ಅವಳ ಮೆರವಣಿಗೆ! ಜನ ಭಯದಿಂದ ಮುದುಡಿದರು. 'ದ್ರೋಹಿಯ ತಾಯಿ'ಯೆಂದು ಗುರುತಿಸಿದವರು, ಮುಖ ಮುರಿದರು.

ಅಲ್ಲೊಂದು ಹೆಣ್ಣು-ಶವವೊಂದರ ಬದಿಯಲ್ಲಿ ನೆಲಕ್ಕಂಟಿದಂತೆ ಕುಳಿತ ಅವಳ ಶರೀರ. ತಾರೆಗಳಿಗೆ ಮುಖವೆತ್ತಿ ಪ್ರಾರ್ಥಿಸುತ್ತಿದ್ದಳು.

ದ್ರೋಹಿಯ ತಾಯಿ ಮೊನ್ನ ಮಾರಿಯಾನ ಕೇಳಿದಳು.

"ಯಾರದು ಶವ, ಗಂಡನದೆ ?"

"ಅಲ್ಲ"

"ಅಣ್ಣನದೆ ?"

"ಅಲ್ಲ ಮಗನದು. ಹದಿಮೂರು ದಿನಗಳ ಹಿಂದೆ ನನ್ನ ಗಂಡನನ್ನು ಕೊಂದರು. ಇಂದು ಮಗನ ಸರದಿ. ತಾಯಿ ಮಡೊನ್ನಾ ಎಲ್ಲ ನೋಡುತ್ತಿದ್ದಾಳೆ. ನಾ ಅವಳಿಗೆ ಕೃತಜ್ಞೆ."

"ಏಕೆ ?"

"ನನ್ನ ಮಗನೀಗ ಸತ್ತಿದ್ದಾನೆ. ತಾಯಿಭೂಮಿಯ ವಿಜಯಕ್ಕಾಗಿ ಹೋರಾಡುತ್ತಾ ವೀರಸ್ವರ್ಗ ಸೇರಿದ್ದಾನೆ. ನನಗೆ ಭಯವಿತ್ತು. ಮೊನ್ನ ಮಾರಿಯನ ಮಗನಂತೆ ನನ್ನ ಹುಡುಗು ಮನಸ್ಸಿನ ಮಗ ನಗರಕ್ಕೆ ದ್ರೋಹ ಮಾಡಬಹುದೆಂಬ ಭಯವಿತ್ತು. ಅಂಥ ದ್ರೋಹಿಯ ಹೆತ್ತ ಗರ್ಭಕ್ಕೆ ಧಿಕ್ಕಾರವಿರಲಿ"

ಮಾರಿಯಾನ ಮುಖ ಮುಚ್ಚಿಕೊಂಡಳು.

ಮರುದಿನ ಮುಂಜಾನೆ ನಗರ-ರಕ್ಷಿತರ ಎದುರು ನಿಂತಳು.

"ನನ್ನ ಮಗನೀಗ ನಿಮ್ಮ ವೈರಿ. ನನ್ನನ್ನು ಕೊಂದು ಬಿಡಿ, ಇಲ್ಲ ನಗರದ ದ್ವಾರ ತೆರೆದು, ನನ್ನ ಮಗನಲ್ಲಿಗೆ ಹೋಗಲು ಬಿಡಿ."

"ಈ ನಗರ ನಿನಗೆ ಅಮೂಲ್ಯವಲ್ಲವೆ ಮರಿಯಾನ ? ನಿನ್ನ ಮಗ ನಮಗಷ್ಟೇ ಅಲ್ಲ, ನಿನಗೂ ಶತ್ರು"

"ನಾನವನ ತಾಯಿ. ಅವನನ್ನು ಪ್ರೀತಿಸುವವಳು. ಅವನ ನಡತೆಗೆ ನಾನೂ ಕಾರಣಳೆ."

ಅವರೊಳಗೇ ಮಾತಾಡಿಕೊಂಡರು. ಕಡೆಗೊಂದು ನಿರ್ಧಾರ.

"ನಿನ್ನ ಮಗನ ಹತ್ಯೆಗಳಿಗೆ ನಿನ್ನ ಗಲ್ಲಿಗೇರಿಸುವುದು ನ್ಯಾಯವಲ್ಲ. ಅವನನ್ನು ಈ ವಿನಾಶದ ಹಾದಿಗೆ ನೀ ನಡೆಸಿಲ್ಲ, ನಮಗದು ಗೊತ್ತು. ಆದರೆ ಖೈದಿಯಾಗಿಯೂ ನೀ ನಮಗೆ ಬೇಕಿಲ್ಲ."

ಅವರು ನಗರದ ದ್ವಾರ ತೆರೆದರು.

ತನ್ನ ಮಗ, ಅಸಂಖ್ಯಾತರ ರಕ್ತ ಹರಿಸಿ ತೋಯಿಸಿದ್ದ, ಕೆಂಪಾದ ನೆಲದ ಮೇಲೆ ಅಳುಕು ಹೆಜ್ಜೆ ಇಡುತ್ತಾ ತಾಯಿ ಹೊರಟಳು. ಆ ಮಣ್ಣಿನಿಂದ ಒಂದೊಂದೇ ಹೆಜ್ಜೆ ಕಿತ್ತಿಡುತ್ತಾ, ನಾಡಿಗಾಗಿ ಮಡಿದ ಯೋಧರ ಶವಕ್ಕೆ ತಲೆ ಬಾಗುತ್ತಾ, ಮೃತ್ಯುವನ್ನು ಕರೆತಂದ ಆಯುಧಗಳ ಜಿಗುಪ್ಸೆಯಿಂದ ನೂಕುತ್ತಾ....ಮೆಲ್ಲನೆ ನಡೆದಳು. ಜನ ನೋಡುತ್ತಲೇ ಇದ್ದರು. ನೀರ ಹೊತ್ತ ನೀರೆಯಂತೆ, ಎಲ್ಲಿ ತುಳುಕುವುದೋ ಎಂಬ ಭಯದಲ್ಲಿ, ನೋವು ಹೊತ್ತ ತಾಯಿ ನಿಧಾನವಾಗಿ ನಡೆದಿದ್ದಳು.

ಶತ್ರು ಡೇರೆಯಲ್ಲಿ ಕುತೂಹಲದ ಗದ್ದಲ. ಯಾರೀಕೆ ? ಬಳಿ ಬಂದರು, ವಿಚಾರಿಸಿದರು.

"ನಿಮ್ಮ ಮುಖಂಡ, ನನ್ನ ಮಗ" ಆಕೆ ಹೇಳಿದಳು ಅವರು ಶಂಕಿಸಲಿಲ್ಲ. ಅವಳ ಗುಣಗಾನ ಮಾಡಿದರು. ಮಗನ ಧೈರ್ಯ ಸಾಹಸ ಚತುರತೆಯ ಹಾಡಿ ಹೊಗಳಿದರು. ತಾಯಿ ಹೆಮ್ಮೆಯಿಂದ ಕಿವಿಯರಳಿಸಿ ಕೇಳಿದಳು.

ಕೊನೆಗೊಮ್ಮೆ ಅವನೆದುರು ಬಂದು ನಿಂತಳು. ಅವನೆದುರು...ತನ್ನ ಹೃದಯದಿಂದ ಬೇರೇ ಎಂದೇ ತಿಳಿಯದಿದ್ದ ಮಗನೆದುರು. ರೇಶ್ಮೆ ಜರಿಗಳಲ್ಲಿ ಮಿರಿ ಮಿರಿ ಮಿನುಗುತ್ತಾ ಆತ ನಿಂತಿದ್ದ. ಹೊಳವು ವಜ್ರಗಳಿಂದ ಅಲಂಕೃತ ಆಯುಧ ಎಲ್ಲವೂ ಕನಸಿನಲ್ಲಿ ಕಂಡಂತೆ ...ಅವಳ ಕನಸಿನಂತೆ ಈಗಾತ ಶ್ರೀಮಂತ, ಪ್ರಸಿದ್ಧ, ಆರಾಧಿತ, !

"ಅಮ್ಮಾ" ಹಸ್ತವನ್ನು ಚುಂಬಿಸಿ ಹೇಳಿದ. "ನೀ ಬಂದೆ ನೀ ನನ್ನ ಬಳಿ ಬಂದೆ. ನಾಳೆಯೇ ಆ ಶಪಿತ ನಗರವನ್ನು ವಶಪಡಿಸಿಕೊಳ್ಳುವೆ"

"ನೀ ಹುಟ್ಟಿದ ನಗರವನ್ನು......"ಆಕೆ ಜ್ಞಾಪಿಸಿದಳು. ಶೌರ್ಯದ ನಶೆಯಲ್ಲಿ, ಕೀರ್ತಿಯ ತೃಷೆಯಲ್ಲಿ, ಯೌವನದ ಅಟ್ಟಹಾಸದಲ್ಲಿ ಆತ ಹೇಳಿದ.

"ಈ ಜಗತ್ತಿಗೆ ನಾ ಹುಟ್ಟಿದವನು, ಜಗತ್ತಿಗಾಗಿ ಹುಟ್ಟಿದವನಲ್ಲ. ಪ್ರಪಂಚವೇ ಅಚ್ಚರಿಯಿಂದ ನಡುಗುವಂತೆ ಮಾಡುವೆ. ನಿನಗಾಗಿ ಈ ನಗರವನ್ನು ಉಳಿಸಿದ್ದೆ. ಪ್ರಸಿದ್ಧಿಯ ಪ್ರಖರ ಶಿಖರ ಏರುವಲ್ಲಿ ತಡೆದು ನಿಂತಿದ್ದೆ. ಆದರೆ ಈಗ ನೀ ಬಂದಿರುವೆ. ನಾಳೆಯೇ ಆ ಹೆಡ್ಡರ ಪಾಳ್ಯವನ್ನು ಧ್ವಂಸ ಮಾಡುವೆ"

"ಅಲ್ಲಿನ ಒಂದೊಂದು ಕಲ್ಲೂ ನಿನ್ನ ಬಾಲ್ಯವನ್ನು ನೆನೆಯುತ್ತಿದೆ ಮಗು"

"ಕಲ್ಲುಗಳು ಮಾತಿಲ್ಲದವು. ಮನುಷ್ಯರು ಮಾತಾಡಿಸಬೇಕಷ್ಟೆ. ಬೆಟ್ಟಗಳು ಮಾತಾಡಲಿ, ಪರ್ವತಗಳು ನನ್ನ ಬಗ್ಗೆ ಮಾತಾಡಲಿ. ಅದು ನನ್ನ ಇಚ್ಛೆ"

"ಜನರು ?"

"ಓಹ್ ಹೌದು. ಅವರನ್ನು ಮರೆತಿದ್ದೆ. ಅಮ್ಮ, ಅವರೂ ನನಗೆ ಬೇಕು. ಜನರ ನೆನಪುಗಳಲ್ಲಿ ವೀರರು ಶಾಶ್ವತರಾಗುತ್ತಾರಲ್ಲವೆ ?"

"ವೀರರು ಬದುಕನ್ನು ಸೃಷ್ಟಿಸುವವರು...ಸಾವಿಗೆ ಸವಾಲಾಗುವವರು...ಸಾವನ್ನು ಜಯಿಸುವವರು."

"ಇಲ್ಲ"...ಆತ ವಿರೋಧಿಸಿದ. "ವಿಧ್ವಂಸಕ ಸೃಷ್ಟಿಸಿದವನಷ್ಟೇ ದೊಡ್ಡವನು ನೋಡು, ರೋಮ್ ನಗರವನ್ನು ಕಟ್ಟಿದ ಏನೀಸೋ, ರೋಮುಲಸ್ನೋ ಯಾರಿಗೂ ಗೊತ್ತಿಲ್ಲ. ಆದರೆ ಅಲಾರೀಕ್ ಹೆಸರು ಪ್ರತಿಯೊಬ್ಬರಿಗೂ ಗೊತ್ತು. ನಗರವನ್ನು ಪುಡಿಮಾಡಿದ ಇತರ ವೀರರ ಹೆಸರು......"

"ಹೌದು ಅವರ ಹೆಸರುಗಳು ಶಾಶ್ವತವಾಗಿವೆ." ಆಕೆ ವಿಷಾದದಿಂದ ಮುಗಿಸಿದಳು.

ಹೀಗೆ, ಸೂರ್ಯ ಮುಳುಗುವವರೆಗೆ ಮಾತಾಡಿದರು. ಅವನ ತಡೆ ಇಲ್ಲದ ಉನ್ಮತ್ತ ಮಾತುಗಳನ್ನು ಕೇಳಿದಷ್ಟೂ ಅವಳೆದೆಯ ಅಭಿಮಾನ ಕುಸಿಯಿತು. ತಾಯಿ ಸೃಷ್ಟಿಸುತ್ತಾಳೆ. ರಕ್ಷಿಸುತ್ತಾಳೆ. ವಿನಾಶದ ಪರ ವಾದಿಸುವುದು. ಅವಳ ವಿರುದ್ಧ ಕೈ ಎತ್ತಿದಂತೆ ಬದುಕಿನ ಸಿದ್ಧಾಂತಗಳ ಅಸ್ತಿತ್ವದ ತತ್ವಗಳನ್ನೇ ತಾನು ನಿರಾಕರಿಸುತಿದ್ದೇನೆಂದು ಅವನಿಗೆ ಗೊತ್ತಿರಲಿಲ್ಲ. ತಾಯಿ ಎಂದಿಗೂ ಸಾವಿನ ವಿರೋಧಿ. ಜನರ ಮನೆಗೆ ಮೃತ್ಯು ಕರೆತರುವ ಕೈಗಳು ತಾಯಿಂದಿರಿಗೆ ಎಷ್ಟು ಅಸಹ್ಯವಾದುವು. ಮಗನಿಗೆ ಅದು ಕಾಣುವಂತಿಲ್ಲ. ಕೀರ್ತಿಯ ಹೊಳಪು ಅವನ ಕಣ್ಣು ಕುರುಡಾಗಿಸಿದೆ. ಆದರೆ ತಾ ಸೃಷ್ಟಿಸಿದ, ಲಾಲಿಸಿದ 'ಬದುಕು' ಕುಸಿಯುವಾಗ ತಾಯಿ ಎಷ್ಟು ಧೈರ್ಯವಂತಳೋ ಅಷ್ಟೇ ನಿಷ್ಕರುಣಿಯೂ ಆಗಬಲ್ಲಳು !

ತಲೆ ತಗ್ಗಿಸಿ ಕುಳಿತಳು. ನಾಯಕನ ವೈಭವೀಕೃತ ಡೇರೆಯ ಬಾಗಿಲಿಂದ ತನ್ನ ನಗರವನ್ನೇ ದಿಟ್ಟಿಸಿ ನೋಡಿದಳು. ಅದೇ ನಗರ...ತನ್ನೊಳಗೆ ಜೀವದ ಸೆಳೆ ಸಿಹಿಯಾಗಿ ಮುಲುಕಾಡಿದ ಸ್ಥಳ, ಈ ಮಗನ ಬಸಿರ ಬೇನೆ ತಿಂದ ನೆಲ. ಈಗವ ಅದೇ ನಗರದ ವಿನಾಶಕ್ಕೆ ಕತ್ತಿ ಎತ್ತಿದ್ದಾನೆ.

ಮುಳುಗಿದ ಸೂರ್ಯನ ಕೆಂಪು ಕಿರಣಗಳು ನಗರದ ಗೋಡೆಗೋಪುರಗಳ ರಕ್ತದಲ್ಲಿ ಅದ್ದಿದಂತೆ ತೋಯಿಸಿವೆ. ನಗರ ಸತ್ತ ಹೆಣದಂತೆ ಮುಲುಕಾಡದೆ ಮಲಗಿದೆ. ತಾರೆಗಳು ಅಂತ್ಯಕ್ರಿಯೆಗೆ ಜಮಾಯಿಸಿದಂತೆ ಮಂಕಾಗಿವೆ. ತಾಯಿ ನೋಡಿದಳು—ಹೆದರಿ ಎದುರಿದ ಜನರ, ಹಾದಿ ಬೀದಿಗಳಲ್ಲಿ ಅನಾಥವಾದ ಶವಗಳ, ನೋವಿನ ಮುಖಗಳ, ಸಾವಿನ ಸುಳಿಗಳು......ಅವಳ ನಗರ ಅವಳ ಹೃದಯದೊಂದು ಭಾಗವಾದ ನಗರ...ಇಂದು ಅವಳ ನಿರ್ಧಾರದ ನಿರೀಕ್ಷೆಯಲ್ಲಿ ಕಾದಿದೆ. ಆ ಕ್ಷಣಕ್ಕೆ ಆ ನಗರದೆಲ್ಲರ ತಾಯಿ ತಾನೆನಿಸಿತು.

ಆತ ಹೇಳಿದ—

"ಈ ರಾತ್ರಿ ದಾಳಿ ಮಾಡುತ್ತೇನೆ. ರಾತ್ರಿ ಸಾಕಷ್ಟು ಕತ್ತಲಿದೆ. ಮೋಡಗಳು ಕವುಚಿ ನಿಂತಿವೆ. ಹಗಲಲ್ಲಿ ಕೊಲ್ಲುವುದು ಕಷ್ಟ. ಸೂರ್ಯನೆದುರು ಝಳಪಿಸುವ ಕತ್ತಿಗಳು ಕಣ್ಣು ಕೋರೈಸುತ್ತವೆ. ನಮ್ಮ ಹೊಡೆತಗಳು ಗುರಿ ತಪ್ಪುತ್ತವೆ. ಆತ ಕತ್ತಿಯನ್ನು ಆಪ್ಯಾಯಮಾನವಾಗಿ ಪರೀಕ್ಷಿಸಿದ.

ತಾಯಿ ಹೇಳಿದಳು–

"ಬಾ ಮಗು ನನ್ನೆದೆಯಲ್ಲಿ ತಲೆ ಇಟ್ಟು ವಿಶ್ರಮಿಸು ನೀ ಮಗುವಿದ್ದಾಗ ಎಷ್ಟು ಸಹೃದಯಿಯಾಗಿದ್ದೆ. ಕರುಣಿಯಾಗಿದ್ದೆ...ಎಲ್ಲರೂ ನಿನ್ನನು ಪ್ರೀತಿಸುವವರೆ !"

ಆತ ವಿಧೇಯನಾಗಿ ಅವಳ ಮಡಲಲ್ಲಿ ತಲೆ ಇಟ್ಟು ಕಣ್ಣು ಮುಚ್ಚಿ ಹೇಳಿದ—"ನಾ ಕೀರ್ತಿ, ಯಶಸ್ಸನ್ನು ಮಾತ್ರ ಪ್ರೀತಿಸುವೆ. ಈ ರೀತಿ ನನ್ನ ರೂಪಿಸಿದ ನಿನ್ನನ್ನೂ ಪ್ರೀತಿಸುವೆ"

"ಹೆಂಗಸರನ್ನು..." ಬಾಗಿ ಹೇಳಿದಳು ತಾಯಿ

"ಅವರು ಬೇಕಷ್ಟಿದ್ದಾರೆ. ಅತಿ ಸಿಹಿಯಾದದ್ದೂ ಬೇಸರವೇ ಅಲ್ಲವೆ ?"

"ಮಕ್ಕಳು ಬೇಕಿಲ್ಲವೆ." ಕೊನೆಯದಾಗಿ ಕೇಳಿದಳು

"ಮಕ್ಕಳು ಏತಕ್ಕೆ ? ಸಾಯುವುದಕ್ಕೆ ? ನನ್ನಂಥವರ ಖಡ್ಗಕ್ಕೆ ಬಲಿಯಾಗುವುದಕ್ಕೆ ಅದು ನನಗೆ ನೋವು ತರಬಹುದು. ನಾ ಪ್ರತೀಕಾರ ತೀರಿಸದಷ್ಟು ಅಶಕ್ತನೂ, ಮುದುಕನೂ ಆಗಬಹುದು"

"ನೀನೆಷ್ಟು ಸುಂದರನಿದ್ದೀಯ ಮಗು, ಆದರೆ ಮಿಂಚಿನ ಹೊಳಪಿನಂತೆ ಕ್ಷಣಿಕ ಬೆಳಕು, ಮತ್ತೆಲ್ಲ ಬರಡು ..."

"ಮಿಂಚಿನಂತೆ...ಹೌದು" ಆತ ಮುಗುಳ್ನಕ್ಕು ಉತ್ತರಿಸಿದ.

(12 ನೇ ಪುಟಕ್ಕೆ)

ಹೋರಾಟದ ಕಣದಲ್ಲಿ ಕಪ್ಪು ಹೆಣ್ಣು

೧೯೫೬ರ ಆಗಸ್ಟ್ ೯. ದಕ್ಷಿಣ ಆಫ್ರಿಕಾದಲ್ಲಿ ೨೦,೦೦೦ಕ್ಕೂ ಹೆಚ್ಚು ಮಹಿಳೆಯರು ಪ್ರಿಟೋರಿಯಾದ ಯೂನಿಯನ್ ಬಿಲ್ಡಿಂಗ್‌ನತ್ತ ಧಾವಿಸಿದರು. ವರ್ಣಭೇದ ನೀತಿಯ ಸರ್ಕಾರದ ಪ್ರಧಾನ ಮಂತ್ರಿಗೆ ತಮ್ಮ ಪ್ರತಿಭಟನೆಯನ್ನು ಸೂಚಿಸುವುದು ಅವರ ಉದ್ದೇಶವಾಗಿತ್ತು. ಪಾಸ್ ಕಾಯ್ದೆಯನ್ನು ಮಹಿಳೆಯರಿಗೂ ವಿಸ್ತರಿಸುವ ಸರ್ಕಾರದ ನೀತಿಯ ವಿರುದ್ಧದ ಪ್ರತಿಭಟನೆಯದಾಗಿತ್ತು. ಅಂದು ಪ್ರಿಟೋರಿಯಾದಲ್ಲಿ ಮೆರವಣಿಗೆ, ಸಭೆಗಳನ್ನು ಬಹಿಷ್ಕರಿಸಲಾಗಿದ್ದರಿಂದ ಮಹಿಳೆಯರು ಮೂವರು ಮಂದಿಯ ಗುಂಪುಗಳಾಗಿ ದಕ್ಷಿಣ ಆಫ್ರಿಕಾದ ಹಲವಾರು ಭಾಗಗಳಿಂದ ಪ್ರಿಟೋರಿಯಾದತ್ತ ಕಾಲ್ನಡಿಗೆಯಲ್ಲಿ ಸಾಗಿದ್ದರು. ಈ ಪ್ರದರ್ಶನ ಎಲ್ಲ ರೀತಿಯ ವೈವಿಧ್ಯದಿಂದಲೂ ಕೂಡಿತ್ತು: ಹಸಿರು ಮತ್ತು ಕಪ್ಪು ಬಣ್ಣದ ಕಾಂಗ್ರೆಸ್ ಕುಪ್ಪಸ ತೊಟ್ಟ ವನಿತೆಯರು, ಚಿತ್ತಾಕರ್ಷಕ ಬಣ್ಣದ ಸೀರೆಗಳನ್ನು ಧರಿಸಿದ ಭಾರತೀಯ ಮಹಿಳೆಯರು, ತಲೆಗೆ ಕರವಸ್ತ್ರಗಳನ್ನು ಸುತ್ತಿದ ಕ್ಸೋಸಾ ಮಹಿಳೆಯರು. ಎಲ್ಲರೂ ಪ್ರವಾಹದಂತೆ ಹರಿದು ಬಂದು ಎಲ್ಲೆಲ್ಲೂ ತುಂಬಿ ತುಳುಕಿದರು. ಈ ಮಹಿಳೆಯರು ಸಹಿ ಮಾಡಿದ ಸಾವಿರಾರು ಮನವಿ ಪತ್ರಗಳನ್ನು ತೆಗೆದುಕೊಂಡು ಮಹಿಳಾ ನಾಯಕಿಯರು ಪ್ರಧಾನ ಮಂತ್ರಿಗೆ ಮನವಿ ಸಲ್ಲಿಸಲು ಹೋದರು. ಆದರೆ ಅವರಿಗೆ ಪ್ರಧಾನ ಮಂತ್ರಿಯ ಭೇಟಿಯಾಗಲಿಲ್ಲ. ನಂತರ ಮೂವತ್ತು ನಿಮಿಷಗಳ ಕಾಲ ಸಂಪೂರ್ಣ ಮೌನ ತಾಳಿ ಎಲ್ಲರೂ ನಿಂತರು. ಕಡೆಗೆ ಭೋರ್ಗರೆಯಿತು. ಅವರೆಲ್ಲರ ಹೃದಯದಾಳದಿಂದ ಗೀತೆಯೊಂದು:

> ಬಂದಿದ್ದೀರ, ಮಹಿಳೆಯರ ತಂಟೆಗೆ
> ಅಭೇದ್ಯ ಬಂಡೆಯ ಮೇಲೆ ಎರಗಿದ್ದೀರ ನೀವು
> ಈ ಬಂಡೆಯನ್ನೇನಾದರೂ ಅಲುಗಿಸಿದರೆ
> ನುಚ್ಚು ನೂರಾಗುತ್ತೀರ, ನೀವು.

೧೯೫೬ರ ಈ ಪ್ರತಿಭಟನೆ ವರ್ಣಭೇದ ನೀತಿಯ ಆಳ್ವಿಕೆಯನ್ನೇ ಅಲುಗಾಡಿಸಿತು. ರೊಚ್ಚಿಗೆದ್ದ, ಆದರೆ ಸುಸಂಘಟಿತರಾದ ಸಾಹಸಿ ಮಹಿಳೆಯರ ಸಾಮರ್ಥ್ಯವನ್ನು ಪ್ರಕಟ ಪಡಿಸಿತು. ಮುಂದಿನ ಎಲ್ಲ ಹೋರಾಟಗಳ ಸರಣಿಗೆ ಇದು ನಾಂದಿಯಾಯಿತು. ಈ ಮಹತ್ತರ ಘಟನೆಯಿಂದಾಗಿ ಆಗಸ್ಟ್ ೯, ದಕ್ಷಿಣ ಆಫ್ರಿಕಾ ಮಹಿಳೆಯರ ದಿನವಾಗಿದೆ.

ಇಂದು ದಕ್ಷಿಣ ಆಫ್ರಿಕಾದಲ್ಲಿ ಅಸಂಖ್ಯಾತ ಮಹಿಳೆಯರು ಹಲವಾರು ಮಹಿಳಾ ಸಂಘಟನೆಗಳಡಿಯಲ್ಲಿ ಸಂಘಟಿತರಾಗಿ ವರ್ಣಭೇದ ನೀತಿಯ ವಿರುದ್ಧ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ. ೧೯೧೨ರಲ್ಲಿ ಆರಂಭವಾದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಮಹಿಳಾ ವಿಭಾಗವು ಪಾಸ್ ಕಾಯಿದೆಯ ವಿರುದ್ಧ ಮಹಿಳೆಯರನ್ನು ಸಂಘಟಿಸುವುದರತ್ತ ಹೆಚ್ಚು ಕ್ರಿಯಾಶೀಲವಾಗಿದೆ. ೧೯೬೦ರಲ್ಲಿ ಇದು ರಾಜಕೀಯ ಕಾರಣಕ್ಕಾಗಿ ಸರ್ಕಾರದಿಂದ ನಿಷೇಧಕ್ಕೊಳಪಟ್ಟಿತು. ಅದೇ ರೀತಿ ದಕ್ಷಿಣ ಆಫ್ರಿಕಾ ಮಹಿಳಾ ಫೆಡರೇಷನ್ ಕೂಡ ೧೯೬೦ರಲ್ಲಿ ನಿಷೇಧಕ್ಕೊಳಪಟ್ಟಿತು. 'ಸ್ವಾತಂತ್ರ್ಯ, ಭದ್ರತೆ, ಸರ್ವರಿಗೂ ಶಾಂತಿ ಮತ್ತು ಸಮಾನ ಹಕ್ಕುಗಳನ್ನು ಪಡೆಯುವತ್ತ' ದುಡಿಯುವ ಉದ್ದೇಶದ ಈ ಸಂಘಟನೆ ರೂಪುಗೊಂಡದ್ದು ೧೯೫೪ರಲ್ಲಿ. ಬಂಟು ವಿದ್ಯಾಭ್ಯಾಸವನ್ನು ನಿರಾಕರಿಸುವ ಉದ್ದೇಶಕ್ಕಾಗಿಯೇ ೧೯೭೫ರಲ್ಲಿ ಹುಟ್ಟಿಕೊಂಡ 'ಕಪ್ಪು ಮಹಿಳೆಯರ ಫೆಡರೇಷನ್' ನಲವತ್ತೊಂದು ಮಹಿಳಾ ಸಂಘಟನೆಗಳನ್ನೂ ಪ್ರತಿನಿಧಿಸುತ್ತದೆ. ೧೯೭೭ರಲ್ಲಿ ಈ ಸಂಘಟನೆಯನ್ನೂ ಸರ್ಕಾರ ನಿಷೇಧಿಸಿತು. ನಮೀಬಿಯಾದ ಸೌತ್ ವೆಸ್ಟ್ ಆಫ್ರಿಕಾ ಜನತೆಯ ಸಂಘಟನೆಯ (swampo) ಮಹಿಳಾ ಘಟಕವಾದ ಸ್ವಾಂಪೋ ವಿಮೆನ್ಸ್ ಕೌನ್ಸಿಲ್ ೧೯೭೦ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು

● ಆಶಾ

ಅಲ್ಲಿನ ಮಹಿಳೆಯರಿಗೆ ಸಂಬಂಧಪಟ್ಟ ಆರೋಗ್ಯ, ನೈರ್ಮಲ್ಯ, ಸಾಕ್ಷರತೆ, ಕೃಷಿ ಸಹಕಾರ ಸಂಘಗಳನ್ನು ಕುರಿತಂತೆ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.

ಇಂದು ದಕ್ಷಿಣ ಆಫ್ರಿಕೆಯಲ್ಲಿ ಎರಡೂವರೆ ಕೋಟಿ ಕಪ್ಪು ಜನರು ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಸಿರುವ ಹೋರಾಟವನ್ನು ನಂದಿಸಲು ಅಧ್ಯಕ್ಷ ಬೋಥಾ ತುರ್ತುಪರಿಸ್ಥಿತಿಯನ್ನು ಹೇರಿದ್ದಾನೆ. ಸುಮಾರು ನೂರು ವರ್ಷಗಳಿಂದಲೂ ಅವಿಚ್ಛಿನ್ನವಾಗಿ ಸಾಗಿರುವ ದಕ್ಷಿಣ ಆಫ್ರಿಕಾ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರದು ಸಮವಾದ ಸಕ್ರಿಯ ಪಾತ್ರ. ಎಲ್ಲ ವರ್ಗದ ಸ್ವಾತಂತ್ರ್ಯ ಪ್ರಿಯ, ಮಾನವತಾವಾದಿ ಮಹಿಳೆಯರೂ ಈ ಹೋರಾಟದ ಕಣದಲ್ಲಿದ್ದಾರೆ. ಮಹಿಳಾ ಕಾರ್ಮಿಕರು, ವೈದ್ಯೆ, ಶಿಕ್ಷಕಿ, ವಿದ್ಯಾರ್ಥಿಗಳು, ಸಮಾಜ ಸೇವಾ ಕಾರ್ಯಕರ್ತರು, ಗೃಹಿಣಿಯರು ಮಕ್ಕಳು, ವಯಸ್ಕರು, ಮುದುಕಿಯರು, ವಯೋಮಾನ ಭೇದವಿಲ್ಲದೆ, ಆರೋಗ್ಯದ ಪರಿವೆಯಿಲ್ಲದೆ ಹೋರಾಟದ ಕಣದಲ್ಲಿದ್ದಾರೆ. ಹೋರಾಟ ಅವರ ಜೀವನದ ಉಸಿರಾಗಿದೆ.

ಕಳೆದ ವರ್ಷವಷ್ಟೇ "ಬಹುಸಂಖ್ಯಾತ ಕರಿಯ ಜನತೆಗೆ ಇಂದು ಚರ್ಚಿಸಲು ಇರುವ ಒಂದೇ ವಿಷಯ–ಅಧಿಕಾರದ ಹಸ್ತಾಂತರ" ಎಂದು ಪತ್ರಿಕಾ ಸಂದರ್ಶನದಲ್ಲಿ ನುಡಿದದ್ದಕ್ಕಾಗಿ ವಿನ್ನಿ ಮೆಂಡೆಲಾನ ಮನೆಯನ್ನು ಸಂಪೂರ್ಣ ಸುಟ್ಟು ಹಾಕಲಾಗಿತ್ತು. ಇಂದು ದೇಶದಲ್ಲಿರುವ ತುರ್ತುಪರಿಸ್ಥಿತಿಯಿಂದಾಗಿ ಗೃಹಬಂಧನದಲ್ಲಿರುವ ವಿನ್ನಿ ಮೆಂಡೆಲಾ ದಕ್ಷಿಣ ಆಫ್ರಿಕಾ ಸಾಹಸಿ ಹೋರಾಟಗಾರ್ತಿಯರಲ್ಲಿ ಅಗ್ರಗಣ್ಯಳು. ಅಲ್ಲಿನ ವಿಮೋಚನಾ ಹೋರಾಟದ ಅದಮ್ಯ ಶಕ್ತಿ ಸಾಮರ್ಥ್ಯದ ಆತ್ಮ ಸ್ಥೈರ್ಯದ ಸಂಕೇತ ಅವಳು. ಇಪ್ಪತ್ತೈದು ವರ್ಷಗಳಿಂದಲೂ ಸೆರೆಮನೆಯಲ್ಲಿ ಕೊಳೆಯುತ್ತಿರುವ ಅವಳ ಪತಿ, ರಾಷ್ಟ್ರ ನಾಯಕ ನೆಲ್ಸನ್ ಮ್ಯಾಂಡೆಲಾರವರ ಹೋರಾಟದ ಕಿಚ್ಚನ್ನು ಸ್ವಲ್ಪವೂ ಆರದಂತೆ ಎತ್ತಿ ಹಿಡಿದು ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟಗಾರರಿಗೆ ಅಷ್ಟೇ ಅಲ್ಲ, ಜಗತ್ತಿನಾದ್ಯಂತ ನಡೆಯುತ್ತಿರುವ ದಬ್ಬಾಳಿಕೆಯ ವಿರುದ್ಧದ ಶಾಂತಿಪರ ಹೋರಾಟಗಳಿಗೆ ಸ್ಫೂರ್ತಿದಾಯಿನಿಯಾಗಿದ್ದಾಳೆ. ಅವರ ಮದುವೆಯ ಮೂರು ತಿಂಗಳ ನಂತರ ೧೯೫೮ರಲ್ಲಿ ಪಾಸ್ ಕಾಯ್ದೆಯ ವಿರುದ್ಧ ಪ್ರತಿಭಟಿಸಿದ್ದಕ್ಕಾಗಿ ಸೆರೆಮನೆ ವಾಸ ಅನುಭವಿಸಿದಳು ವಿನ್ನಿ. ಆಗ ಅವಳು ಗರ್ಭಿಣಿಯಾಗಿದ್ದರೂ ಸರ್ಕಾರ ಯಾವ ರಿಯಾಯಿತಿಯನ್ನೂ ತೋರಿಸಲಿಲ್ಲ. ಅವಳ ಒಟ್ಟು ವೈವಾಹಿಕ ಜೀವನದಲ್ಲಿ ಗಂಡನೊಡನೆ ಅವಳು ಕಳೆದ ಸಮಯ ಹೆಚ್ಚೆಂದರೆ ನಾಲ್ಕು ತಿಂಗಳು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಸದಸ್ಯೆಯಾಗಿ ವಿನ್ನಿ ಮ್ಯಾಂಡೆಲಾ ಅವಳ ಜೀವಿತದ ಬಹುಪಾಲು ಸಮಯವನ್ನೆಲ್ಲಾ ಗೃಹಬಂಧನ, ಸೆರೆಮನೆ ವಾಸ, ಒಂಟಿತನ, ಪೋಲೀಸರಿಂದ ಕಿರುಕುಳ ಅನುಭವಿಸಿಯೇ ಕಳೆದಿದ್ದಾಳೆ. ಸಮಾಜ ವಿಜ್ಞಾನದ ಡಿಪ್ಲೊಮೋ ಪದವೀಧರೆಯಾದ ವಿನ್ನಿ ಮ್ಯಾಂಡೆಲಾ ತನ್ನ ವೃತ್ತಿ ಜೀವನವನ್ನು ಮುಂದುವರಿಸಲಾಗಲಿಲ್ಲ. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಮಹಿಳಾ ಘಟಕದ ಸಕ್ರಿಯ ಕಾರ್ಯಕರ್ತೆಯಾಗಿ ದುಡಿದ ವಿನ್ನಿ ಅವಳ ಜೀವಮಾನದ ಬಹಳಷ್ಟು ಕಾಲ ಸೆರೆಮನೆ ವಾಸದ ರುಚಿಯನ್ನೇ ಕಂಡವಳು. ಒಂಟಿತನ ಅವಳು ಆರಿಸಿಕೊಂಡ ಬುತ್ತಿಯಾಗಿದೆ. ಈಗಲೂ ಅವಳು ಪತಿ ಮೆಂಡೆಲಾನನ್ನು ನೋಡುವ ಅವಕಾಶ ಸಿಗುವುದೇ ಎರಡು, ಮೂರು ತಿಂಗಳಿಗೊಮ್ಮೆ; ಕೇವಲ ಮೂವತ್ತು ನಿಮಿಷಗಳ ಅವಧಿ. ಈಗ ಬ್ರಾಂಡ್ ಫೋರ್ಟ್‌ನಲ್ಲಿ ಒಬ್ಬ ಮಗಳೊಂದಿಗೆ ಗೃಹ ಬಂಧನದಲ್ಲಿರುವ ವಿನ್ನಿ ತನ್ನ ಸ್ಥಿತಿಯನ್ನು ವಿವರಿಸುವಂತೆ, "ಬ್ರಾಂಡ್ ಫೋರ್ಟ್ ಒಂದು ಜೀವಂತ ಸಮಾಧಿ, ನನ್ನ ಚೈತನ್ಯವನ್ನು ನುಚ್ಚುನೂರು ಮಾಡಲೆಂದೇ ಮಾಡಿದಂತಿದೆ. ಆದರೆ ಇದಾಗುವುದು ಸಾಧ್ಯವಿಲ್ಲ." ಪತ್ರಕರ್ತರೊಬ್ಬರು ವಿನ್ನಿ ಮೆಂಡೆಲಾಳನ್ನು ಕುರಿತು ಹೇಳಿರುವ ಮಾತುಗಳು ಇಡೀ ದಕ್ಷಿಣ ಆಫ್ರಿಕಾ ಜೀವನಕ್ಕೆ ಸಂಬಂಧಿಸುತ್ತದೆ: "ಅವಳ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಷ್ಟೂ ಹೆಚ್ಚು ಹೆಚ್ಚು ಅವರ ಹೋರಾಟದ ಕಿಚ್ಚು ಹೆಚ್ಚುತ್ತದೆ. ಅವಳಿಗೆ ಬಂಧನದಲ್ಲಿರುವುದು ಅಥವಾ ಹೊರಗಿರುವುದು ಎರಡರಲ್ಲೂ ಹೆಚ್ಚಿನ ವ್ಯತ್ಯಾಸವಿಲ್ಲ. ಅವಳ ಪ್ರಕಾರ ದಕ್ಷಿಣ ಆಫ್ರಿಕಾದಲ್ಲಿರುವ ಪ್ರತಿಯೊಬ್ಬ ಪ್ರಜೆಯೂ ಜೈಲಿನಲ್ಲಿರಲಿ, ಹೊರಗಿರಲಿ ಬಂಧನದಲ್ಲಿದ್ದಂತೆ. ಜೈಲಿನ ಗಾತ್ರ ಹೆಚ್ಚು ಕಡಿಮೆಯಾಗಬಹುದಷ್ಟೆ."

೮೬ ವರ್ಷದ ಮುದುಕಿ ಫ್ರಾನ್ಸಿಸ್ ಬಾರ್ಡ್ ದಕ್ಷಿಣ ಆಫ್ರಿಕಾದ ಕಾರ್ಮಿಕ ಸಂಘಟನೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದಳು. ೧೯೪೮ರಲ್ಲಿ

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸೇರಿದ ಫ್ರಾನ್ಸಿಸ್ ಅದರ ಮಹಿಳಾ ಘಟಕದ ಕಾರ್ಯದರ್ಶಿಯಾಗಿ ಕೆಲಸ ಮಾಡಿದವಳು. ಪಾಸ್ ಕಾಯಿದೆಯ ವಿರುದ್ಧದ ಹೋರಾಟ, ಬಂಟು ವಿದ್ಯಾಭ್ಯಾಸಕ್ಕೆ ಬಹಿಷ್ಕಾರ— ಮುಂತಾದ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗ ವಹಿಸಿದಳು. ಅವಳ ಜೀವತದ ಅವಧಿಯಲ್ಲಿ ಬಹಳಷ್ಟು ಸಮಯವನ್ನು ಸೆರೆಮನೆ ವಾಸದಲ್ಲಿ ಕಳೆದ ಫ್ರಾನ್ಸಿಸ್‌ಳು ತನ್ನ ಸಂಗಾತಿಗಳಿಗೆ ಕೊಡುತ್ತಿದ್ದ ಕರೆ: "ನೀನು ಎಲ್ಲಿಯೇ ಕೆಲಸ ಮಾಡುತ್ತಿರು, ಕಡಿಮೆ ಕೂಲಿಯ ವಿರುದ್ಧ ಹೋರಾಡಲು ಒಂದಾಗು. ಐಕ್ಯತೆ ಮತ್ತು ಸಂಘಟನೆಯಿದ್ದರೆ ನಿಮ್ಮನ್ನಾರೂ ಭೇದಿಸಲಾರರು."

ದಕ್ಷಿಣ ಆಫ್ರಿಕಾ ವಿದ್ಯಾರ್ಥಿ ಸಂಘಟನೆಯ ಉಪಾಧ್ಯಕ್ಷೆಯಾದ ನ್ಕೊಸಾಜಾನಾ ಡ್ಲಾಮಿನಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಸಕ್ರಿಯ ಭೂಗತ ಸದಸ್ಯೆ. ರಾಜಕೀಯ ಕೈ ಬೀಸಿ ಕರೆದಾಗ ವೈದ್ಯಕೀಯ ವಿದ್ಯಾಭ್ಯಾಸವನ್ನು ಅರ್ಧದಲ್ಲಿ ಬಿಟ್ಟಳು. ಪೋಲೀಸರ ವಕ್ರ ದೃಷ್ಟಿಗೆ ಸಿಕ್ಕಿದಾಗ ಅವರಿಂದ ತಪ್ಪಿಸಿಕೊಂಡು ಪಶ್ಚಿಮ ಯುರೋಪಿಗೆ ವಲಸೆ ಹೋಗಿ ನೆಲೆಸಿ ಅಲ್ಲಿಂದಲೇ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನೊಂದಿಗೆ ಕೆಲಸ ಮಾಡಲುಪಕ್ರಮಿಸಿದಳು. ಅಲ್ಲಿಯೇ ವಿದ್ಯಾಭ್ಯಾಸ ಮುಗಿಸಿ ಈಗ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದಾಳೆ.

ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದಲ್ಲಿ ಎಲ್ಲ ವರ್ಣದವರೂ ಇದ್ದಾರೆನ್ನುವುದಕ್ಕೆ ಹೆಲೆನ್ ಜೋಸೆಫ್ ಒಂದು ಜೀವಂತ ನಿದರ್ಶನ. ಅನಾರೋಗ್ಯ, ವೃದ್ಧಾಪ್ಯದಿಂದ ಸಾಕಷ್ಟು ಹಣ್ಣಾಗಿರುವ ಅವಳು ಜೀವನದಲ್ಲಿ 15 ವರ್ಷಗಳ ಕಠಿಣ ಶಿಕ್ಷೆಯೊಂದಿಗೆ, ಈಗ ಕಡೆಯದಾಗಿ 1980ರಿಂದ ಸೆರೆಮನೆವಾಸ ಅನುಭವಿಸುತ್ತಿದ್ದಾಳೆ. ವೃತ್ತಿಯಿಂದ ಶಿಕ್ಷಕಿಯಾಗಿರುವ ಶ್ವೇತವರ್ಣೀಯ ಹೆಲೆನ್ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾಳೆ. ದಕ್ಷಿಣ ಆಫ್ರಿಕಾದ ಮಹಿಳಾ ನಾಯಕಿಯಾಗಿ ಪಾಸ್ ಕಾಯಿದೆಯ ವಿರುದ್ಧದ ಹೋರಾಟಕ್ಕೆ ಮಾರ್ಗದರ್ಶಿಯಾಗಿದ್ದಾಳೆ. 1956ರಲ್ಲಿ ಸಪ್ರೆಷನ್ ಆಫ್ ಕಮ್ಯೂನಿಸಂ ಆ್ಯಕ್ಟ್ ಅನ್ವಯ ಬಂಧಿತಳಾದ ಹೆಲೆನ್ ಆನಂತರ ಹಲವಾರು ವರ್ಷಗಳ ಸೆರೆಮನೆ ವಾಸ,ಗೃಹ ಬಂಧನದ ರುಚಿ ಕಂಡಿದ್ದಾಳೆ. ವಿನ್ನಿ ಮೆಂಡೆಲಾಳನ್ನು ತನ್ನ ಮಗಳಂತೆ ಕಾಣುವ ಇವಳಿಗೆ ವಿನ್ನಿ ಒಳ್ಳೆಯ ಸ್ನೇಹಿತೆ.

1976ರ ಸಮಯದಲ್ಲಿ ವಿದ್ಯಾರ್ಥಿಗಳ ಮುಷ್ಕರ, ಪ್ರತಿಭಟನೆಗಳ ಚಟುವಟಿಕೆಗಳಲ್ಲಿ ಅತ್ಯಂತ ಸಕ್ರಿಯ ಪಾತ್ರ ವಹಿಸಿ ವಿದ್ಯಾರ್ಥಿ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಡೆಬೋರಾ ಮಾಬೇಲ್ ಫೆಬ್ರುವರಿ 1977ರಲ್ಲಿ ಅವಳ ಮದುವೆಯ ಮರುದಿನವೆ ಭಯೋತ್ಪಾದಕ ಕಾಯಿದೆಯನ್ವಯ ಬಂಧಿತಳಾದವಳು. ಆಫ್ರಿಕದ ಸೂರ್ಯನಂತೆ, ಜೀವದ ಸಂಕೇತವಾದ



ವಿನ್ನಿ ಮೆಂಡೆಲಾ

ಅದಮ್ಯ ಚೇತನ ಫ್ಲಾರೆನ್ಸ್ ಮಾಟೊಮೆಲಾ. ವರ್ಣ ದ್ವೇಷಿ ಸರ್ಕಾರದ ಕಾರಾಗೃಹ ವ್ಯವಸ್ಥೆಗೆ ಬಲಿಯಾಗಿ 1969ರಲ್ಲಿ ನಿಧನಳಾದಳು. ಅವಳ ಜೀವನದಲ್ಲಿ ಬಂಧನ ಕ್ಕೊಳಗಾದದ್ದು, ಬಿಡುಗಡೆಯಾದದ್ದು ಲೆಕ್ಕವಿಲ್ಲದಷ್ಟು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಮಹಿಳಾ ಘಟಕದ ಸಂಘಟನಾ ಕಾರ್ಯದರ್ಶಿಯಾಗಿ ಬಹಳ ಕಾಲ ದುಡಿದಳು.

ಬಿಳಿಯರ ಅಧಿಪತ್ಯದ ಆಫ್ರಿಕಾದ ವಿಶ್ವವಿದ್ಯಾನಿಲಯದಲ್ಲಿ ವೈಶಿಷ್ಟ್ಯಪೂರ್ಣವಾಗಿ ತನ್ನ ಬುದ್ಧಿಮತ್ತೆಯನ್ನು ಮೆರೆದ ಫಾತಿಮಾ ಮೀರ್ ಅಂತರ

ರಾಷ್ಟ್ರೀಯ ಖ್ಯಾತಿಯ ಸಮಾಜಶಾಸ್ತ್ರಜ್ಞೆ. ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ನೇಟಲ್ ವಿಶ್ವವಿದ್ಯಾನಿಲಯವನ್ನು ಅಧ್ಯಾಪಕಿಯಾಗಿ ಸೇರಿದ ಫಾತಿಮಾ 1973ರಲ್ಲಿ ದಕ್ಷಿಣ ಆಫ್ರಿಕಾ ಸಮಾಜ ಶಾಸ್ತ್ರಜ್ಞರ ಸಂಘದ ಅಧ್ಯಕ್ಷೆಯಾದಳು. ಈ ರೀತಿಯ ಗೌರವ ಸಂದದ್ದು ಕಪ್ಪು ಮಹಿಳೆಗೆ ಇದೇ ಮೊದಲು. ಅವಳ ಬೌದ್ಧಿಕ ಚಟುವಟಿಕೆಯ ಜೊತೆ ಜೊತೆಗೆ ಸಾಗಿತ್ತು ರಾಜಕೀಯ ಚಟುವಟಿಕೆ ಕೂಡ. 1959ರಲ್ಲಿ ಸ್ಥಾಪನೆಗೊಂಡ ದಕ್ಷಿಣ ಆಫ್ರಿಕಾ ಮಹಿಳಾ ಫೆಡರೇಷನ್‌ನ ಸ್ಥಾಪಕ ಸದಸ್ಯೆಯರಲ್ಲಿ ಇವಳೂ ಒಬ್ಬಳು. 1975ರಲ್ಲಿ ಆರಂಭವಾದ ದಕ್ಷಿಣ ಆಫ್ರಿಕ ಕಪ್ಪು ಮಹಿಳೆಯರ ಫೆಡರೇಷನ್ ಪ್ರಥಮಾಧ್ಯಕ್ಷೆಯಾಗಿಯೂ ಚುನಾಯಿತಳಾದಳು. ರಾಷ್ಟ್ರೀಯ ಭದ್ರತಾ ಕಾಯಿದೆಯನ್ವಯ ಎರಡು ಮೂರು ಬಾರಿ ಬಂಧಿತಳಾಗಿದ್ದ ಫಾತಿಮಾಳು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಉಪನ್ಯಾಸ ಮಾಲೆಯನ್ನು ಕೊಡುವುದಕ್ಕಾಗಿ ಹೋಗಬೇಕಾಗಿ ಬಂದಾಗ ಪಾಸ್‌ಪೋರ್ಟನ್ನು ನಿರಾಕರಿಸಲಾಯಿತು. ಆದರೆ ಪ್ರತಿಷ್ಠಿತ ಬುದ್ಧಿಜೀವಿಗಳೆಲ್ಲರ ಒತ್ತಡದಿಂದ ಅಂತೂ 1978ರಲ್ಲಿ ಸಮಾಜಶಾಸ್ತ್ರದ 9ನೇ ವಿಶ್ವ ಕಾಂಗ್ರೆಸ್‌ನಲ್ಲಿ ಭಾಗವಹಿಸಲು ಅವಳಿಗೆ ಅನುಮತಿ ಸಿಕ್ಕಿತು.

ದಕ್ಷಿಣ ಆಫ್ರಿಕಾದ ವಿಮೋಚನಾ ಹೋರಾಟದಲ್ಲಿ ಶಸ್ತ್ರಸಜ್ಜಿತ ಹೋರಾಟದಲ್ಲಿ ಕೇಳಿಬರುವ ಮಹಿಳೆಯರ ಹೆಸರುಗಳಲ್ಲಿ ತಂಡಿ ಮೊಡೈಸ್ ಬಹು ಮುಖ್ಯಳು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ತರಬೇತಿ ಪಡೆದ ಹೋರಾಟಗಾರ್ತಿ ಇವಳು. ಭಯೋತ್ಪಾದಕ ಕಾಯಿದೆಯನ್ವಯ 1980ರ ನವೆಂಬರ್‌ನಲ್ಲಿ ಅವಳ ಎಂಟು ತಿಂಗಳ ಮಗುವಿನೊಂದಿಗೆ ಅವಳನ್ನು ಬಂಧಿಸಿ ಎಂಟು ವರ್ಷಗಳ ಕಾಲ ಸೆರೆಮನೆವಾಸದ ಶಿಕ್ಷೆಯನ್ನು ವಿಧಿಸಲಾಯಿತು. ಅಂಗೋಲಾ ಮತ್ತು ಟಾಂಜೇನಿಯಾದಲ್ಲಿ ಗೆರಿಲ್ಲಾ ಯುದ್ಧ ಕಲೆಯಲ್ಲಿ ತರಬೇತಿ ಪಡೆದ ತಂಡಿ 1979ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹಿಂತಿರುಗಿಬಂದು ಭೂಗತವಾಗಿದ್ದುಕೊಂಡೇ ಗೆರಿಲ್ಲಾ ಯುದ್ಧದಲ್ಲಿ ಭಾಗಿಯಾಗಿದ್ದಳು. ಅವಳು ಮೊದಲ ಬಾರಿ ಸೆರೆಯಲ್ಲಿದ್ದಾಗ ಐದುತಿಂಗಳ ಗರ್ಭಿಣಿ. ಅವಳಿಗೆ ಆಗ ಸಾಕಷ್ಟು ಚಿತ್ರಹಿಂಸೆಯನ್ನು ಕೊಡಲಾಗುತ್ತಿತ್ತು. ಜೈಲಿನ ಒಂಟಿತನ ಅವಳಿಗೆ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಚೋದಿಸುತ್ತಿತ್ತು. ಅವಳು ಉಳಿದ ಮಹಿಳಾ ಕೈದಿಗಳೊಂದಿಗೆ ಈಗಲೂ ಪ್ರಿಟೋರಿಯಾದ ಕೇಂದ್ರ ಕಾರಾಗೃಹದಲ್ಲಿದ್ದಾಳೆ.

ಹೀಗೆ ದಕ್ಷಿಣ ಆಫ್ರಿಕಾ ಹೋರಾಟದ ಕಣವಾಗಿದೆ. ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿರುವ ದಕ್ಷಿಣ ಆಫ್ರಿಕಾದ ಮಹಿಳೆಯರ ಹೋರಾಟದ ಮೊದಲ ಗುರಿ ರಾಷ್ಟ್ರೀಯ ವಿಮೋಚನೆ. 'ಮಳೆಹಿಯರ ವಿಮೋಚನೆ, ಇಲ್ಲದೆ ರಾಷ್ಟ್ರೀಯ ವಿಮೋಚನೆ ಇಲ್ಲ. ರಾಷ್ಟ್ರೀಯ ವಿಮೋಚನೆ ಇಲ್ಲದೆ ಮಹಿಳೆಯರ ವಿಮೋಚನೆ ಇಲ್ಲ' ಎಂಬುದನ್ನು ಮನಗಂಡಿರುವ ಇಲ್ಲಿನ ಮಹಿಳೆಯರು ವರ್ಣದ್ವೇಷಿ ಸರ್ಕಾರಕ್ಕೆ ಮಣಿಯದೆ ಪುರುಷ ಪ್ರಧಾನ ಸಾಂಪ್ರದಾಯಿಕ ಸಮಾಜಕ್ಕೆ ಶರಣಾಗದೆ ಹೋರಾಡುತ್ತಿದ್ದಾರೆ.

ದ್ರೋಹಿಯ ತಾಯಿ

(8ನೇ ಪುಟದಿಂದ)

ಆತ ಅವಳ ಎದೆಯ ಮೇಲೆ ಮಗುವಂತೆ ಮಲಗಿದ. ತಾಯಿ ಅವನನ್ನು ತನ್ನ ಕಪ್ಪು ಸೆರಗಲ್ಲಿ ಮುಚ್ಚಿ, ಅವನೆದೆಗೆ ಚೂರಿ ಚುಚ್ಚಿದಳು. ಒಂದೇ ಕಂಪನದಲ್ಲಿ ಆತ ಸತ್ತ. ತನ್ನ ಮಗನ ಹೃದಯವನ್ನು ಅವಳಿಗಿಂತ ಚೆನ್ನಾಗಿ ಬಲ್ಲವರು ಯಾರಿದ್ದರು ! ದಿಗ್ಮೂಢರಾದ ಕಾವಲು ಸಿಪಾಯಿಗಳ ಕಾಲುಬುಡಕ್ಕೆ ಅವನ ಶವ ಎಸೆದು ಹೇಳಿದಳು—

"ಓರ್ವ ಪ್ರಜೆಯಾಗಿ ನನ್ನ ಕರ್ತವ್ಯ ಮಾಡಿರುವೆ. ತಾಯಿಯಾಗಿ ನಾ ನನ್ನ ಮಗನೊಡನೇ ಉಳಿವವಳು. ಮತ್ತೊಂದು ಹೆರುವಷ್ಟು ಸಮಯವಿಲ್ಲ. ನನ್ನ ಬದುಕೀಗ ಯಾರಿಗೂ ಪ್ರಯೋಜನವಿಲ್ಲದ್ದು."

ಅದೇ ಕತ್ತಿ, ಮಗನ ರಕ್ತದಿಂದಿನ್ನೂ ಬಿಸಿ ಇದ್ದ ಕತ್ತಿ ಅವಳೆದೆಗೆ ಚುಚ್ಚಿಕೊಂಡಳು. ನೇರವಾಗಿ ಎದೆಗೆ ನಾಟಿತು. ನೋಯುವ ಹೃದಯ ಸಿಗುವುದು ಕಷ್ಟವೆ ?



ಪ್ರಗತಿಯ ಪ್ರತಿಬಿಂಬ-ವಿಯೆಟ್ನಾಂ ಮಹಿಳೆ

* ನೀನಾ ರಾಯ್

* ಅನುವಾದ : ಭಾರತಿ

ರಣರಂಗದಲ್ಲಿಯೂ ಯಶಸ್ವಿಯಾದವರು ವಿಯೆಟ್ನಾಂ ಮಹಿಳೆಯರು. 'ವಿಯೆಟ್ನಾಂ ಮಹಿಳೆ' ಕುರಿತಂತೆ ಆರ್ಲಿನ್ ಎಲ್ಸೇನ್ ಅವರು 1974 ರಲ್ಲಿ ಪುಸ್ತಕವೊಂದನ್ನು ಹೊರತಂದಿದ್ದರು. 'ವಿಯೆಟ್ನಾಂನಲ್ಲಿ ಮಹಿಳೆಯರು ಮತ್ತು ಕ್ರಾಂತಿ' ಎಂಬ ಅವರ ಹೊಸ ಪುಸ್ತಕವು 1975 ರ ರಾಷ್ಟ್ರೀಯ ವಿಮೋಚನೆ ನಂತರದ ವಿಯೆಟ್ನಾಂ ಮಹಿಳೆಯ ಚಿತ್ರವನ್ನು ನೀಡುತ್ತದೆ.

ಆರ್ಲಿನ್ ಅವರು ಪತ್ರಕರ್ತೆ, ಸಂಶೋಧಕಿ, ಮಹಿಳಾ ಅಧ್ಯಯನಗಳ ಶಿಕ್ಷಕಿ ಮತ್ತು ನಾಗರಿಕ ಹಕ್ಕು, ಯುದ್ಧ ವಿರೋಧಿ, ಮಹಿಳಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವವರು. ಸಂದರ್ಶನ, ವರದಿ ಮತ್ತು ಇತಿಹಾಸ ಸಂಶೋಧನೆ ಆಧಾರದ ಈ ಪುಸ್ತಕವು ಸಮಾಜವಾದಿ ಸಮಾಜದ ಚೌಕಟ್ಟಿನಲ್ಲೇ ವಿಯೆಟ್ನಾಂ ಮಹಿಳೆಯರು ನಡೆಸಿದ ವಿಮೋಚನಾ ಹೋರಾಟದ ಪ್ರಗತಿಯ ಹೆಜ್ಜೆಗಳನ್ನು ಬಿಂಬಿಸಿದೆ. ಸ್ತ್ರೀತ್ವವಾದ (ಫೆಮಿನಿಸಂ) ಮತ್ತು ಸಮಾಜವಾದಿ ತತ್ವದ ನಡುವಣ ಚರ್ಚೆಯಲ್ಲಿ ಬರುವ ಕೆಲವು ಮುಖ್ಯ ಪ್ರಶ್ನೆಗಳ ಬಗೆಗೂ ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದೆ. ಸಮಾಜವಾದಿ ಸಮಾಜ ನಿರ್ಮಿಸುವಲ್ಲಿ ಮೂರನೇ ವಿಶ್ವದ ರಾಷ್ಟ್ರಗಳು ಎದುರಿಸುವ ಸಮಸ್ಯೆ, ಸಂಕಷ್ಟಗಳನ್ನು ನಿರೂಪಿಸಲಾಗಿದೆ. ಈ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದರಿಂದ 'ಕ್ರಾಂತಿಯಲ್ಲಿ ಕ್ರಾಂತಿ', ರಾಜಕೀಯ ನಾಯಕತ್ವದಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ವಿಯೆಟ್ನಾಂ ಬದುಕಿನ ವಿವಿಧಸ್ತರಗಳಲ್ಲಿ ನಿರ್ಧಾರ ಕೈಗೊಳ್ಳುವುದು ಇವೇ ಮುಂತಾದವು ಮಧ್ಯಬಿಂದುವಾಗುತ್ತವೆ.

ಇತರ ಅನೇಕ ರಾಷ್ಟ್ರಗಳಂತೆ ವಿಯೆಟ್ನಾಂನಲ್ಲಿ ಕೂಡ ಮಹಿಳೆಯರು ರಾಷ್ಟ್ರೀಯ ವಿಮೋಚನಾ ಚಳುವಳಿಯ ಸಾಂಕೇತಿಕ ಶಕ್ತಿಯಾಗಿದ್ದಾರೆ. ಸಮರಕಾಲದಲ್ಲಿ ಪಡೆದಿದ್ದ ಅನುಭವವನ್ನು ಮಹಿಳೆಯರು ಶಾಂತಿಕಾಲಕ್ಕೂ ಬಳಸಿಯಾರೆ ? ಅಥವಾ ಅಧಿಕಾರದ ಗದ್ದುಗೆ ಏರಿದ ಸಮಾಜವಾದಿಗಳು ಮಹಿಳೆಯರ ಬಗ್ಗೆ ತಾವು ಮಾಡಿಕೊಂಡಿದ್ದ ಬದ್ಧತೆಯನ್ನು ಗಾಳಿಗೆ ತೂರಿ ಬಿಡುವರೆ ? ವಿಮೋಚನೆ-ಮಹಿಳೆ ಸೂತ್ರವನ್ನು ಆದರ್ಶ ಮಾಡಿಕೊಳ್ಳುವ ಸ್ತ್ರೀತ್ವವಾದಿಗಳು ಮಹಿಳಾ ವಿಮೋಚನೆಗೆ ತಕ್ಕ ವಾತಾವರಣ ನಿರ್ಮಿಸುವುದು ಸಮಾಜವಾದ ಎಂಬ ವಾದವನ್ನು ಅನೇಕ ಬಾರಿ ತಿರಸ್ಕರಿಸಿದ್ದಾರೆ. ಎಲ್ಲ ರೀತಿಯ ಲೈಂಗಿಕ ಪಾತ್ರ (ಸೆಕ್ಸ್‌ರೋಲ್) ವನ್ನು ಕಿತ್ತು

ವಿಯೆಟ್ನಾಂನಲ್ಲಿ ಮಹಿಳೆ ಮತ್ತು ಕ್ರಾಂತಿ
ಲೇಖಕಿ : ಅರ್ಲಿನ್ ಎಲ್ಸೇನ್
ಪ್ರಕಾಶಕರು : ಬೆಡ್ ಟುಕ್ಸ್ಲಿ, ಲಂಡನ್

ಬಿಸಾಕುವುದು ಸ್ತ್ರೀತ್ವವಾದಿಗಳ ಕನಸು. ಆದರೆ ವಿಯೆಟ್ನಾಂ ಸಮಾಜದಲ್ಲಿ ಮಹಿಳೆಯರು ಸೈನಿಕರಷ್ಟೇ ಅಲ್ಲ, ಮಕ್ಕಳಿಂದ ಅಗಲಿದ ತಾಯಂದಿರು, ಸೈನಿಕರಿಗಾಗಿ ಸ್ವೆಟರ್ ಹಾಕುವ ಮಹಿಳೆಯರೂ ಇದ್ದಾರೆ. ಆದುದರಿಂದ ಸ್ತ್ರೀತ್ವವಾದಿಗಳ ಕನಸನ್ನು ನನಸಾಗಿಸುವುದು ವಿಯೆಟ್ನಾಂ ಮಹಿಳೆಯರ ಗುರಿಯಲ್ಲ. ಸಮರದಿಂದ ಧ್ವಂಸವಾಗಿರುವ, ಆರ್ಥಿಕವಾಗಿ ಹಿಂದುಳಿದಿರುವ ರಾಷ್ಟ್ರದ ದಿನ ನಿತ್ಯ ಸಮಸ್ಯೆ ಎದುರಿಸುವುದೇ ಅವರ ಮುಖ್ಯ ಗುರಿಯಾಗಿದೆ. ಕುಟುಂಬದ ಆರೋಗ್ಯ ಮತ್ತು ಪೌಷ್ಟಿಕಾಂಶ ಕೊರತೆ ನೀಗುವ ಸಂಕಷ್ಟಗಳಿದ್ದಾಗ ಅವರಿಗೆ ಸ್ಥಾನಮಾನವು ಹೆಚ್ಚಿನ ಆತಂಕ ಉಂಟುಮಾಡಲಾರದು.

ಅನುಭವದ ಮಾತು

ವಿಮೋಚನೆ ಬಗ್ಗೆ ಮಾತನಾಡುವಾಗ ವಿಯೆಟ್ನಾಂ ಮಹಿಳೆಯರು ಊಳಿಗಮಾನ್ಯದ ದಬ್ಬಾಳಿಕೆ, ಫ್ರಾನ್ಸ್

ಸಾಮ್ರಾಜ್ಯಶಾಹಿ, ಅಮೆರಿಕ ಆಕ್ರಮಣದ ಅನುಭವ ಮತ್ತು ಸಮಾಜವಾದಿ ಸಮಾಜ ಕಟ್ಟುವ ವಿಧಾನದ ಅನುಭವಗಳ ಹಿನ್ನೆಲೆಯಲ್ಲಿಯೇ ಹೇಳುತ್ತಾರೆ. ಪರಿಸ್ಥಿತಿ ಅವರನ್ನು ತುಂಬಾ ಮುಂದಕ್ಕೆ ತಳ್ಳಿದೆ, ಕಠಿಣಗೊಳಿಸಿದೆ. ದಾರಿದ್ರ್ಯ, ಯುದ್ಧ ಮತ್ತು ಸಾವಿನ ಮಧ್ಯೆ ಕೂಡ ಹೋರೆ ಹೋರುವ ಪ್ರಾಣಿ ಸ್ಥಾನದಿಂದ ವಿಯೆಟ್ನಾಂ ಮಹಿಳೆಯರು ತಮ್ಮ ಸಮಾಜದಲ್ಲಿ ಪ್ರಬಲಶಕ್ತಿಯಾಗಿ ರೂಪುಗೊಂಡಿರುವ ಸುಧಾರಣೆಯನ್ನು ನಾವು ನೋಡುತ್ತೇವೆ. ಈ ವಿಧಾನದಲ್ಲಿ, ಸ್ತ್ರೀತ್ವವಾದಿ ಗುರಿಗಳಿಗೆ ಉತ್ತರ ಹುಡುಕುವ ಯತ್ನ ಅರ್ಲಿನ್ ಅವರದು. ಮಹಿಳೆಯರಿಗೆ ಅವು ಹಿಂಸೆಯಾಗದಂತೆ ಕೆಲವು ಪಾತ್ರಗಳನ್ನು 'ಮಹಿಳೆಯರ ಕೆಲಸ' ವೆಂದೇ ಉಳಿಸಿಕೊಂಡು ಹೋಗುವುದು ಸಾಧ್ಯವೆ ? ಪಿತೃ ಪ್ರಧಾನ ಕುಟುಂಬಗಳು ಸಮಾಜವಾದಿ ರಾಷ್ಟ್ರದಲ್ಲಿ ಪ್ರಜಾಸತ್ತಾತ್ಮಕವಾಗ ಬಲ್ಲವೆ ? ಮಹಿಳಾ ವಿಮೋಚನೆಗೆ ಸಮಾಜವಾದಿಗಳು ಕೊಡುವ ಆದ್ಯತೆ ಏನು ? ವಿಯೆಟ್ನಾಂ ಜನರಿಗೆ ವಿಮೋಚನೆ ಎಂದರೆ ಆರ್ಥಿಕ ಭದ್ರತೆ, ದುಡಿಮೆಯ ಹಕ್ಕು, ಆರೋಗ್ಯ ಶಿಕ್ಷಣ, ವಿರಾಮ, ಸಮಾನ ಹಕ್ಕು ಮತ್ತು ಬಹುಪತ್ನಿತ್ವ ಮತ್ತಿತರ ಪುರುಷಪ್ರಧಾನ ಪರಂಪರೆಯಿಂದ ಮುಕ್ತಿ. ಮಹಿಳೆಯರ ಮಾನಸಿಕ ಅಧೀನತ್ವವನ್ನು ಕಡೆಗಾಣಿಸುವ ತಾತ್ವಿಕ ಹೋರಾಟದ ಅಗತ್ಯವನ್ನೂ ಅವರು ಒತ್ತಿ ಹೇಳುತ್ತಾರೆ. ಅವರಿಗೆ ಊಳಿಗಮಾನ್ಯ ಯಜಮಾನರು, ಸಾಮ್ರಾಜ್ಯಶಾಹಿಗಳು ಮತ್ತು ವಸಾಹತುಶಾಹಿಗಳಿಗಿಂತ ಪುರುಷರು ಹೆಚ್ಚು 'ದಬ್ಬಾಳಿಕೆಗಾರರು' ಏನಲ್ಲ. ಇಲ್ಲಿಯೇ ಕ್ರಾಂತಿಕಾರಿ ಬದಲಾವಣೆಯ ಹೋರಾಟಕ್ಕೆ ಸಾಮ್ರಾಜ್ಯಶಾಹಿ ಹಿಡಿತದಲ್ಲಿನ ಜನರ ಮತ್ತು ಬಡ ರೈತರ ಐಕ್ಯ ಪ್ರತಿಬಿಂಬಿತವಾಗಿರುವುದು.

ಯಾವುದು ಮುಖ್ಯ ?

ಆದರೆ ಸ್ತ್ರೀತ್ವವಾದಿ ಕಾರ್ಯಕ್ರಮ ನೋಡಿ:(ಆದ್ಯತೆ ಆಧಾರದ ಮೇಲೆ): 1) ಲೈಂಗಿಕ ಕ್ರಿಯೆ, ಮಾತೃತ್ವ, ಆರೋಗ್ಯ ಶಿಕ್ಷಣ, ಹಿಂಸೆ ಮುಂತಾದವುಗಳ ವಿಚಾರದಲ್ಲಿ ಮಹಿಳೆಯರಿಗೆ ತಮ್ಮ ದೇಹದ ಮೇಲೆ ನಿಯಂತ್ರಣ; 2) ವಿವಾಹದಲ್ಲಿ ಆಯ್ಕೆ ಸ್ವಾತಂತ್ರ್ಯ, ಕುಟುಂಬದಲ್ಲಿ ಪ್ರಜಾತಂತ್ರ ಮತ್ತು ಗೃಹಕೃತ್ಯದಲ್ಲಿ ಕೆಲಸ ಹಂಚಿಕೆ; 3) ಉದ್ಯೋಗ ಮತ್ತು ರಾಜಕೀಯ ನಾಯಕತ್ವದಲ್ಲಿ ಸಮಾನ ಅವಕಾಶ, ಸಮಾನ ವೇತನ, ಹಕ್ಕುಗಳು; 'ಸ್ತ್ರೀತ್ವ' ಗುಣಗಳ ಜನಪ್ರಿಯ ಸಂಸ್ಕೃತಿಗೆ ಗೌರವ. ಇಂಥ 'ಜಾಗತಿಕ' ಗುರಿಗಳನ್ನು ವಿಯೆಟ್ನಾಂ ಮಹಿಳೆಯರ ಮೇಲೆ ಹೇರುವುದು 'ಮನುಷ್ಯ ಶಾಸ್ತ್ರದಂತೆ ಒಳಿತಲ್ಲ' ಎಂದು ಅರ್ಲಿನ್ ಭಾವಿಸುತ್ತಾರೆ. ವಿಯೆಟ್ನಾಂ ಮಹಿಳೆಯರ 'ಮಹಿಳಾಸಂಘ'ದ ರಾಜಕೀಯ ಗೊತ್ತು ಗುರಿಗಳನ್ನು ಪ್ರಶ್ನಿಸುವ ಅರ್ಲಿನ್ ತಮ್ಮ ಈ ವಿಯೆಟ್ನಾಂ ಅಧ್ಯಯನದ ನಂತರ ಸ್ತ್ರೀತ್ವವಾದಿಗಳ ಅಭಿಪ್ರಾಯಗಳಿಗೆ ಸ್ವಲ್ಪ ರಿಯಾಯ್ತಿ ತೋರಿದ್ದಾರೆ.

ಈ ಪುಸ್ತಕದಲ್ಲಿ ಎರಡು ಭಾಗಗಳಿವೆ. 'ಮಹಿಳೆಯರ ಮೇಲಿನ ದಬ್ಬಾಳಿಕೆಯ ಬೇರುಗಳು' ಈ ಭಾಗದಲ್ಲಿ ಇತಿಹಾಸವನ್ನು ಚರ್ಚಿಸಲಾಗಿದೆ. 'ವಿಮೋಚನೆಯ ಬೀಜಗಳು'–ಈ ಭಾಗದಲ್ಲಿ ವಿಯೆಟ್ನಾಂನಲ್ಲಿ ವಿಮೋಚನೆ ಸಾಧ್ಯವಾಗಿರುವುದರ ಪರಿಸ್ಥಿತಿಗಳ ವಿಶ್ಲೇಷಣೆ ಇದೆ. ಮಹಿಳಾರಂಗದಲ್ಲಿನ ಪ್ರಗತಿಯ ಚಿತ್ರವೇ ಪುಸ್ತಕಕ್ಕೆ ಉಪಸಂಹಾರ. ಇದು ಈಗಾಗಲೇ ಜಯಗಳಿಸಿರುವ ಹಕ್ಕುಗಳನ್ನು ಸಮರ್ಥಿಸಿಕೊಳ್ಳುವುದಷ್ಟೇ ಅಲ್ಲ, ವಿಸ್ತರಿಸುವ ಏಕತೆ, ಸಂಘಟನೆ ಮತ್ತು ದೃಷ್ಟಿಕೋನದ ಪರಿಪೂರ್ಣ ಚಿತ್ರವಾಗಿದೆ.

● ಸೋಷಿಯಲ್ ಸೈಂಟಿಸ್ಟ್ ಕೃಪೆ

ಟರ್ಕಿಯಿಂದ ಸಮರ ಬೆದರಿಕೆ ಇರುವುದರಿಂದ ದೇಶದ ಮುಂದಿನ ಮಿಲಿಟರಿ ಸಿಬ್ಬಂದಿಗಾಗಿ ಮಹಿಳೆಯರು ಹೆಚ್ಚು ಮಕ್ಕಳನ್ನು ಹೆರಬೇಕೆಂದು ಗ್ರೀಕ್ ಅಧ್ಯಕ್ಷರು ಹೇಳಿದ ಮಾತು ಅಲ್ಲಿನ ಮಹಿಳಾ ಸಂಘಟನೆಗಳಿಗೆ ಕೋಪವುಂಟು ಮಾಡಿದೆ. "ಸಮರಕ್ಕೆ ಸೈನಿಕರನ್ನು ನೀಡುವ ಯಂತ್ರಗಳಲ್ಲ ನಾವು. ನಮಗೆ ಮಕ್ಕಳು ಬೇಕೆ ಬೇಡವೇ, ಯಾವಾಗ, ಎಷ್ಟು ಬೇಕು, ಎನ್ನುವ ಬಗ್ಗೆ ನಿರ್ಧರಿಸುವವರು ನಾವು. ಯಾವುದೇ ರಾಷ್ಟ್ರೀಯ ಹಿತಾಸಕ್ತಿಯ ಮರೆಯಲ್ಲಿ ನಮ್ಮ ಆಜನ್ಮ ಸಿದ್ಧ ಹಕ್ಕನ್ನು ಯಾರೂ ಪ್ರಶ್ನಿಸಲಾರರು." ಎಂದು ಐದು ಮಹಿಳಾ ಸಂಘಟನೆಗಳು ಒಕ್ಕೊರಲಿನಿಂದ ಹೇಳಿವೆ.

ಚಿತ್ರೋದ್ಯಮದ ಗೋಮುಖ ವ್ಯಾಘ್ರಗಳು

ವಿವಿಧ ರಂಗಗಳಲ್ಲಿ ವಿವಿಧ ರೀತಿಯಲ್ಲಿ ಹೆಣ್ಣಿನ ಶೋಷಣೆ ನಡೆದೇ ಇದ್ದರೂ ಈ ವಿಷಯದಲ್ಲಿ ಯಾವ ಕ್ಷೇತ್ರವೂ ಚಲನಚಿತ್ರ ರಂಗವನ್ನು ಹಿಂದಿಕ್ಕಲಾರದು. ಇಲ್ಲಿ ಹೆಣ್ಣಿನ ಶರೀರ ಸೌಂದರ್ಯದ ಮುಂದೆ ಪ್ರತಿಭೆ ಗೌಣ. ಧರಿಸುವ ಬಟ್ಟೆಯ ಪ್ರಮಾಣ ಕಡಿಮೆಯಿದ್ದಷ್ಟೂ ಗಲ್ಲಾಪೆಟ್ಟಿಗೆ ಭರ್ತಿಯಾಗುತ್ತಾ ಹೋಗುತ್ತದೆ, ಎಂಬುದು ಈ ರಂಗದಲ್ಲಿ ಮೊದಲು ಆವಿಷ್ಕಾರವಾದ ಸಿದ್ಧ ಸೂತ್ರ.

ಹೆಚ್ಚಿನ ನಿರ್ಮಾಪಕ ನಿರ್ದೇಶಕರು ಯಾವ ಉದಾತ್ತ ಘೋಷಣೆಗಳಿಲ್ಲದೆ, ಹಣಕ್ಕಾಗಿ ಹೆಣ್ಣಿನ ಬಟ್ಟೆ ಬಿಚ್ಚಿಸುತ್ತೇವೆ ಎಂದು ನೇರವಾಗಿ ಒಪ್ಪಿಕೊಂಡೇ ಈ ಕೆಲಸ ಮಾಡುತ್ತಾರೆ. ಇಂಥವರಲ್ಲದೆ ಮತ್ತೊಂದು ಬಗೆಯ ಜನರುಂಟು. 'ಪವಿತ್ರ' ಭಾರತದಲ್ಲಿ ಮಾತೃ ಸ್ವರೂಪಳಾದ ಹೆಣ್ಣನ್ನು ಬತ್ತಲಾಗಿಸಿ ಅವಮಾನ ಗೊಳಿಸಲಾಗುತ್ತಿದೆ ಎಂದು ಗೋಳಿಟ್ಟು ಹೆಣ್ಣಿನ ಉದ್ಧಾರದ ಘೋಷಣೆಗಳಿಂದ ಚಿತ್ರ ತೆಗೆಯುತ್ತಾರೆ. ಆದರೆ ಇವರು ಮಾಡುವ ಮೊದಲ ಕೆಲಸ ಅವಳ ಅಳಿದುಳಿದ ಚೂರು ಪಾರು ಬಟ್ಟೆಗಳನ್ನು ಬಿಚ್ಚಿಸುವುದು. ಮೊಸಳೆ ಕಣ್ಣೀರಿನ ಈ ಜನ ಮೊದಲಿನವರಿಗಿಂತ ಹೆಚ್ಚು ಅಪಾಯಕಾರಿ.

ಈ ವರ್ಗದಲ್ಲಿ ಅಗ್ರಗಣ್ಯ ರಾಜ್‌ಕಪೂರ್. ಪೂಜನೀಯ ಸ್ತ್ರೀ, ಪವಿತ್ರ ಗಂಗೆಯ ಹೆಸರು ಹೇಳುತ್ತಲೇ ಮಂದಾಕಿಯನ್ನು ಅಡಿಯಿಂದ ಮುಡಿಯವರೆಗೆ ಬತ್ತಲಾಗಿಸಿ ರಾಂ ತೇರಿ ಗಂಗಾ ಮೈಲಿಯಲ್ಲಿ ಹಣ ಬಾಚಿಕೊಂಡದ್ದು ಹಳೆಯ ಸಂಗತಿ. ಈ ವಿಷಯದಲ್ಲಿ ಆತನದು ಎಲ್ಲ ನಟಿಯರ ಬಗೆಗೂ ನಿಷ್ಪಕ್ಷಪಾತ ಧೋರಣೆ. ನರ್ಗೀಸ್, ವೈಜಯಂತಿ ಮಾಲಾ, ಪದ್ಮಿನಿ, ಜೀನತ್‌ಅಮಾನ್, ಡಿಂಪಲ್, ಮಂದಾಕಿನಿ– ಎಲ್ಲರಿಂದಲೂ ಆಯಾಯ ಕಾಲಕ್ಕೆ ಅತಿ ಹೆಚ್ಚು ಎನಿಸುವಂತೆ ಬಟ್ಟೆ ಬಿಚ್ಚಿಸಿದ ರಾಜ್‌ಕಪೂರ್ ಚಿತ್ರಗಳ ಮಟ್ಟಿಗೆ ಸೆನ್ಸಾರ್‌ನವರು ಮೊದಲಿನಿಂದಲೂ ಜಾಣಕುರುಡರು.

ಇಂತಹ ಸಾಲಿಗೆ ಸೇರಿದ ಮಹಾನ್ ಚಿತ್ರ 'ಬದ್‌ನಸೀಬ್'. ಎಂದಿನ ಕಣ್ಣಿಗೆ ರಾಚುವ ಬಣ್ಣ ಬಣ್ಣದ ಪೋಸ್ಟರ್‌ಗಳ ಜೊತೆ ಹೆಣ್ಣಿನ ಶೋಷಣೆ ಕುರಿತ, ಸಾಮಾಜಿಕ ಕಳಕಳಿಯುಳ್ಳ ವಿಶಿಷ್ಟ ಚಿತ್ರ ಎಂದು ಸಾರುವ, ಯಾರೋ ಕುಂಡು ಕೇಳರಿಯದ ಮುಖಂಡರು, ಘನ ವಿದ್ವಾಂಸರ ಮೆಚ್ಚುಗೆಯ ಮಾತುಗಳನ್ನು ಉದ್ಧರಿಸುವ ಹೊಸ ಪೋಸ್ಟರುಗಳು ಗೋಡೆ ತುಂಬ ರಾರಾಜಿಸಿದವು. ಉತ್ತಮ ಚಿತ್ರಗಳ ಬಗ್ಗೆ ಒಲವಿರುವ ಪ್ರೇಕ್ಷಕರು ಎರಡನೇ ಪೋಸ್ಟರುಗಳಿಂದ ಆಕರ್ಷಿತರಾದದ್ದು ಸಹಜ. ಆದರೆ ನೋಡ ನೋಡುತ್ತಾ ರಜತ ಪರದೆಯ ತುಂಬ ಒಂದಲ್ಲ ನಾಲ್ಕಾರು ಹೆಣ್ಣುಗಳು ಬತ್ತಲೆ, ಅರೆಬತ್ತಲೆ ಮೈ ಪ್ರದರ್ಶಿಸತೊಡಗಿದಾಗ ಮೋಸ ಹೋದದು ತಿಳಿದು ಸದಭಿರುಚಿಯ ಪ್ರೇಕ್ಷಕರು ಜಿಗುಪ್ಸೆಗೊಳ್ಳುವಂತಾಗುತ್ತದೆ.

● ಶೀಲಾ

ವೇದ, ಉಪನಿಷತ್, ಮನು ಮುಂತಾದವರನ್ನೆಲ್ಲ ಉದಹರಿಸುತ್ತ ಆರಂಭವಾಗುವ ಈ ಚಿತ್ರಕ್ಕೆ ಏಳು ಮಂದಿ ಹದಿ ಹರೆಯದ ಹುಡುಗಿಯರು ನಾಯಕಿಯರು. ಸಮಾನತೆ, ಸ್ವಾತಂತ್ರ್ಯ, ಆತ್ಮಗೌರವಗಳ ಬಗ್ಗೆ ಮಾತನಾಡುತ್ತಾ ವಿದ್ಯಾರ್ಥಿ ಜೀವನ ಪೂರೈಸುವ ಇವರು ವಾಸ್ತವ ಬದುಕಿಗೆ ಕಾಲಿಟ್ಟಾಗ ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲರೂ ಹೇಗೆ ಒಂದಲ್ಲ ಒಂದು ರೀತಿ ಶೋಷಣೆಗೆ ಒಳಗಾಗುತ್ತಾರೆ ಎಂಬುದನ್ನು ಸಾರುವುದು ಚಿತ್ರದ ಉದ್ದೇಶ ಎಂದು ಹೇಳಿಕೊಳ್ಳಲಾಗಿದೆ. ಈ 'ಹೇಗೆ' ಎಂಬುದು ಸಮಸ್ಯೆಯ ವಿಶ್ಲೇಷಣೆಗೆ ದಾರಿಯಾಗಬೇಕೇ ಹೊರತು 'ಹೀಗೆ' ಎಂದು ಪ್ರೇಕ್ಷಕರ

ಮುಂದೆ ಹೆಣ್ಣಿನ ನಗ್ನ ಮೈಗಳನ್ನು, ಅಶ್ಲೀಲ ಭಂಗಿಗಳನ್ನು, ಬೆಡ್‌ರೂಂ ಸೀನುಗಳನ್ನು ಪ್ರದರ್ಶಿಸುವುದಲ್ಲ. ಇಲ್ಲಿ ಒಂದು ಕಥೆ ನೆನಪಾಗುತ್ತದೆ. ರಾಜನೊಬ್ಬನ ಎರಡು ಮುದ್ದಿನ ಹಕ್ಕಿಗಳಲ್ಲಿ ಒಂದು ರಾಣಿಯ ಕೈಯಿಂದ ತಪ್ಪಿಸಿಕೊಂಡು ಹಾರಿಹೋಯಿತು. ಕೋಪಗೊಂಡ ರಾಜ ನೀನು ಹಕ್ಕಿಯನ್ನು ಹಾರಿ ಹೋಗಲು ಹೇಗೆ ಬಿಟ್ಟೆ? ಎಂದು ಕೇಳಿದರೆ ತುಂಟ ಸ್ವಭಾವದ ರಾಣಿ 'ಹೀಗೆ' ಎಂದು ಕೈಯಲ್ಲಿದ್ದ ಮತ್ತೊಂದು ಹಕ್ಕಿಯನ್ನೂ ಹಾರಿ ಬಿಟ್ಟಳಂತೆ. ಇಲ್ಲಿ ತುಂಟತನ ಎನಿಸುವ 'ಹೀಗೆ' ಬದ್‌ನಸೀಬ್ ಚಿತ್ರ ನಿರ್ದೇಶಕರ ಕೈಯಲ್ಲಿ ಕಿಡಿಗೇಡಿತನ, ಗಲ್ಲಾಪೆಟ್ಟಿಗೆಯ ಸ್ವಾರ್ಥವಾಗಿ ಪರಿಣಮಿಸಿ ಹೆಣ್ಣಿನ ಶರೀರದ ಅಂಗುಲ ಅಂಗುಲದ ಪ್ರದರ್ಶನಕ್ಕೆ ದಾರಿಯಾಗಿದೆ. ಅಶ್ಲೀಲ ಮಲೆಯಾಳಂ ಚಿತ್ರಗಳ ಹಿಂದಿ ರೂಪ ಸಾಮಾಜಿಕ ಕಳಕಳಿಯ ಹಣೆ ಪಟ್ಟಿ ಹೊತ್ತು ಪ್ರೇಕ್ಷಕರ ಮುಂದೆ ಬಂದಿದೆ.

ನಟಿಯರು ಒಪ್ಪುವುದರಿಂದಲೇ ನಿರ್ಮಾಪಕ-ನಿರ್ದೇಶಕರು ಅವರನ್ನು ಹೆಚ್ಚು ಹೆಚ್ಚು ಬತ್ತಲಾಗಿಸುತ್ತಾ ಹೋಗುವುದು. ಆದ್ದರಿಂದ ಶೋಷಣೆಯ ಪ್ರಶ್ನೆ ಏನು ಬಂತು? ಎಂಬ ವಾದ ಉಂಟು. ಆದರೆ ನಿರ್ದೇಶಕನಿಗೆ ಹೋಲಿಸಿದರೆ ನಟಿಯದು ಸಾಮಾಜಿಕವಾಗಿ ಸೀಮಿತ ಜವಾಬ್ದಾರಿ. ತನ್ನ ಪಾತ್ರದ ಮಟ್ಟಿಗೆ ಅವಳ ಹೊಣೆಗಾರಿಕೆ ಸೀಮಿತ. ಹಲವಾರು ಪಾತ್ರಗಳನ್ನು ಮೇಳವಿಸಿ, ನಿರ್ಜೀವ ಕಥೆಗೆ ಜೀವ ತುಂಬಿ ಅದರ ಆಂತರಿಕ ಸೌಂದರ್ಯವನ್ನು ಸೆರೆಹಿಡಿದು ಜನರ ಮುಂಡಿಡುವುದರ ಜತೆಗೆ ಆ ಮೂಲಕ ಸಾಮೂಹಿಕ ಜನಾಭಿಪ್ರಾಯವನ್ನು ಸದಭಿರುಚಿಯನ್ನು ರೂಪಿಸಿ ಬೆಳೆಸುವ ಗುರುತರ ಹೊಣೆ ಚಿತ್ರ ನಿರ್ದೇಶಕನದು. ಲಕ್ಷಾಂತರ ಜನರನ್ನು ತಲುಪುವ ಚಲನ ಚಿತ್ರ ಮಾಧ್ಯಮದ ಮೊದಲು ಚಿತ್ರ ನಿರ್ದೇಶಕ. ಹೊಣೆಗಾರಿಕೆಯಿಂದ ಜಾರಿಕೊಂಡು ಇತರ ಲಾಭಗಳನ್ನು, ಸ್ವಾರ್ಥವನ್ನು ಮಾತ್ರ ಸಾಧಿಸಿಕೊಳ್ಳುವ ರಾಜ್‌ಕಪೂರ್, ಶಿವಕುಮಾರ್‌ಗಳು ಮಹಿಳೆಯರ ಆತ್ಮಗೌರವವನ್ನು ಅವಮಾನಿಸಿ ಅವಹೇಳನ ಮಾಡುವ ಗೋಮುಖ ವ್ಯಾಘ್ರಗಳು.

* * *



ಶಾಂತಿಗಾಗಿ ಹೋರಾಟ ನಮ್ಮೆಲ್ಲರ ಹೋರಾಟ

ಜುಲೈ 4, 5, 6 ರಂದು ಬೆಂಗಳೂರಿನಲ್ಲಿ ನಡೆದ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ರಾಷ್ಟ್ರೀಯ ಸಮ್ಮೇಳನದಲ್ಲಿನ ಮಹಿಳಾ ಗೋಷ್ಠಿಯ ಆಯ್ದ ಕೆಲವು ವಿಚಾರಗಳು.

"ಶಾಂತಿಗಾಗಿ ನಡೆಸುವ ಹೋರಾಟ ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು" ಎಂಬುದು ಬಹುಪಾಲು ಮಹಿಳಾ ಪ್ರತಿನಿಧಿಗಳ ಒಕ್ಕೊರಲಿನ ಬೇಡಿಕೆಯಾಗಿತ್ತು. ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ರಾಷ್ಟ್ರೀಯ ಸಮ್ಮೇಳನದ ಸಂದರ್ಭದಲ್ಲಿ ನಡೆದ ಮಹಿಳಾ ಗೋಷ್ಠಿಯಲ್ಲಿ ಕೇಳಿ ಬಂದ ಒಕ್ಕೊರಲಿನ ಧ್ವನಿ ಇದು. ವಿವಿಧ ಜಾತಿ, ವರ್ಗ, ಬಾವುಟಗಳಡಿಯಲ್ಲಿ ಶಾಂತಿಗಾಗಿ ಒಂದೆಡೆ ಬಂದ ಈ ಮಹಿಳೆಯರು ವಿವಿಧ ರಾಜ್ಯಗಳ ವಿವಿಧ ಮಹಿಳಾ ಸಂಘಟನೆಗಳ ಪ್ರತಿನಿಧಿಗಳಾಗಿದ್ದರು. ವೈದ್ಯೆಯರು, ಶಿಕ್ಷಕಿಯರು, ಕಲಾವಿದರು, ಮಹಿಳಾ ಕಾರ್ಮಿಕರು, ಮಹಿಳಾ ಸಂಘಟನಾಕಾರರು ನೆರೆದಿದ್ದ ಈ ಗೋಷ್ಠಿಯಲ್ಲಿ ವಿವಿಧ ಅಭಿಪ್ರಾಯಗಳ ಸಮ್ಮಿಳಿತ ವಿದ್ದರೂ 'ವಿಶ್ವಶಾಂತಿ'ಯ ಚಳುವಳಿಗಾಗಿ ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದರು.

ಚರ್ಚೆಯನ್ನು ಆರಂಭಿಸಿ ಆರಂಭದಲ್ಲಿ ಭಾಷಣ ಮಾಡಿದ ಎನ್. ಎಫ್. ಐ. ಡಬ್ಲ್ಯು.ನ ಅಧ್ಯಕ್ಷೆ ಪ್ರಮೀಳಾ ಲೂಂಬಾ, "ಮಹಿಳಾ ಸಮಾನತೆ ಇಂದು ಸಾಧ್ಯವಾಗಬೇಕಾದರೆ, ಮೊದಲು ವಿಶ್ವ ಸಮರಕ್ಕಾಗಿ ನಡೆಯುತ್ತಿರುವ ಸಿದ್ಧತೆಗಳನ್ನು ನಿಲ್ಲಿಸಲು ಯತ್ನಿಸಬೇಕು. ಈ ವೇಳೆಗಾಗಲೇ ಶಾಂತಿಯ ಅವಶ್ಯಕತೆ, ಶಾಂತಿ ಚಳುವಳಿಯಲ್ಲಿ ಭಾಗವಹಿಸಬೇಕಾದ ಅಗತ್ಯತೆಯನ್ನು ಮಹಿಳೆಯರು ಮನಗಂಡಿದ್ದಾರೆ. ಶಾಂತಿಗೆ ಸಂಬಂಧಿಸಿದ ಪ್ರಶ್ನೆಯನ್ನು ಮಹಿಳಾ ಪ್ರಶ್ನೆಯೊಂದಿಗೆ ಹೊಂದಿಸಬೇಕು. ನಮ್ಮ ಮಹಿಳೆಯರ ದಿನ ನಿತ್ಯದ ಸಮಸ್ಯೆಗಳಿಗೆ ಹೋರಾಡುವುದು ಪರಿಹಾರ ಕಂಡು ಕೊಳ್ಳುವುದೂ ಕೂಡ ವಿಶ್ವಶಾಂತಿಯ ಸಾಧನೆಯತ್ತ ಒಂದು ಹೆಜ್ಜೆ."

"ವಿಶ್ವ ಶಾಂತಿಗಾಗಿ ನಾವು ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ: ಶಸ್ತ್ರಾಸ್ತ್ರಗಳ ಸ್ಪರ್ಧೆ ನಡೆಯದಂತೆ ತಡೆಯುವ ಮತ್ತು 'ಸುಪರ್ ಪವರ್'ಗಳ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ಸರಿಪಡಿಸುವ ಕೆಲಸ ಮಾಡಬೇಕಿದೆ. ಯುದ್ಧ ನಿಷೇಧವನ್ನು ಕುರಿತಂತೆ ಬರುತ್ತಿರುವ ಸಲಹೆ, ಸೂಚನೆಗಳನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ಒತ್ತಾಯ ತರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಬೃಹತ್ ಮಹಿಳಾ ಸಮುದಾಯ ಈ ಎಲ್ಲ ವಿಷಯಗಳ ಅರಿವಿಲ್ಲದೆ ಅವರವರ ಸಣ್ಣ ವಿಶ್ವದಲ್ಲಿಯೇ ಕೊರಗಿ, ನರಳಿ, ತೃಪ್ತರಾಗಿ ಕೂಪ ಮಂಡೂಕದಂತಾಗಿದ್ದಾರೆ. ಅದಕ್ಕೆ ಜೊತೆಯಾಗಿ ಧಾರ್ಮಿಕ ಕಟ್ಟು ಕಟ್ಟಳೆಗಳು, ಮೂಢನಂಬಿಕೆಗಳ ಪರದೆಯಿಂದ ಮುಕ್ತರಾಗಿ ಅವರು ಹೊರ ಜಗತ್ತನ್ನು ನೋಡಬೇಕಾಗಿದೆ. ವಿಶ್ವಶಾಂತಿಗಾಗಿ ನಡೆಸುವ ಹೋರಾಟದಲ್ಲಿ, ಮಹಿಳೆಯರು ಇಂತಹ ಶತ್ರುಗಳನ್ನು ಗುರುತಿಸಿ ಅದರ ವಿರುದ್ಧವೂ ಹೋರಾಡಬೇಕಿದೆ" ಎಂದರು.

ಪಂಜಾಬಿನ ಓಷಿಮಾ ರೇಪಿ ನುಡಿದ ಸ್ವಂತ ಅನುಭವಗಳು ಶಾಂತಿಯನ್ನು ಕುರಿತು ಚರ್ಚೆಗೆ ಒಂದು ಹೊಸ ದಿಕ್ಕನ್ನು ತೋರಿಸಿತು. 'ನಿಮಗೆ ಇಲ್ಲಿ ಯುದ್ಧದ ಅನುಭವವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಾವು ಯುದ್ಧದ ಕಣದಲ್ಲಿದ್ದೇವೆ. ನಮಗಿಂದು ಚರ್ಚಿಸಲು, ಕಾರ್ಯರೂಪಕ್ಕಿಳಿಸಲು, ಎಲ್ಲಕ್ಕೂ ಶಾಂತಿಯೇ ಮುಖ್ಯ ವಸ್ತು. ಹಿಂದೂ ಸಿಖ್ಖರ ನಡುವಿನ ಐಕ್ಯತೆಯೇ ನಮಗೆ ಸದ್ಯದ ಸಂದರ್ಭದಲ್ಲಿ ಶಾಂತಿಯ ಅಗತ್ಯತೆಯಾಗಿದೆ. ಇಂದು ದೇಶವನ್ನ ಅಭದ್ರಗೊಳಿಸಲು

ನಡೆಸುತ್ತಿರುವ ಪ್ರಯತ್ನಗಳಲ್ಲಿ ಮೊದಲಿಗೆ ಪಂಜಾಬ್ ಗುರಿಯಾಗಿದೆ. ಅದಕ್ಕಾಗಿ ಶಸ್ತ್ರಾಸ್ತ್ರಗಳ ಸರಬರಾಜಿಗೆ, ಜಮಾವಣೆಗೆ ಪಂಜಾಬ್ ಸಾಧನವಾಗಿದೆ. ಆದ್ದರಿಂದ ಇಲ್ಲಿನ ಸಮಸ್ಯೆಕೇವಲ ನಮ್ಮ ರಾಜ್ಯಕ್ಕೆ, ರಾಷ್ಟ್ರಕ್ಕೆ ಸೀಮಿತವಾಗಿರದೆ ಅಂತರರಾಷ್ಟ್ರೀಯ ಸ್ವರೂಪ ಹೊಂದಿದೆ. ಶಾಂತಿಗಾಗಿ ನಡೆಸುವ ಹೋರಾಟ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ನಮ್ಮ ಮಹಿಳಾ ಸಂಘಟನೆಯ ಪ್ರತಿನಿಧಿಗಳು ಹಿಂದೂ-ಸಿಖ್ ಮನೆಗಳಿಗೆಲ್ಲಾ ಹೋಗಿ ಅವರಲ್ಲಿ ಬೇರೂರಿರುವ ಸಂಶಯಗಳನ್ನು ತೊಡೆದು ಹಾಕಲು ಯತ್ನಿಸುತ್ತೇವೆ. ವಿನಾಕಾರಣ ಆತಂಕವಾದಿಗಳ ಕೃತ್ಯಕ್ಕೆ ಬಲಿಪಶುವಾದ ದುಃಖತಪ್ತರ ಮನೆಗಳಿಗೆ ಹೋಗಿ ನೊಂದ ಅವರ ಕುಟುಂಬಕ್ಕೆ ಸಮಾಧಾನ, ನೆರವು ನೀಡುತ್ತೇವೆ, ಎಂದರು.

ಬೆಂಗಳೂರಿನ ಗೀತಾರವರು ವಿಶ್ವಶಾಂತಿಯ ಹೋರಾಟವನ್ನು ನಮ್ಮ ಸದ್ಯದ ಸಂದರ್ಭದಲ್ಲಿ ಅರ್ಥೈಸಿಕೊಳ್ಳಬೇಕಾದ ಅಗತ್ಯತೆಯನ್ನು ಕುರಿತು ಹೇಳುತ್ತಾ, "ವಿಶ್ವಶಾಂತಿಯೆನ್ನುವುದು ಅಮೂರ್ತ ಕಲ್ಪನೆಯಲ್ಲ. ನಮ್ಮ ನಗರದಲ್ಲಿ, ಕೆಲಸ ಮಾಡುವ ಜಾಗದಲ್ಲಿ, ವಾಸಿಸುವ ಜಾಗದಲ್ಲಿ, ಬೀದಿಯಲ್ಲಿ ವಿಶ್ವಶಾಂತಿಗೆ ಮಾರಕವಾದ ಶತ್ರುವಿದ್ದಾನೆ. ಅವನನ್ನು ಗುರುತಿಸಿ ಹೋರಾಡಬೇಕು. ಸಾಮ್ರಾಜ್ಯಶಾಹಿಯೇ ಈ ಶತ್ರು. ಸಾಮ್ರಾಜ್ಯಶಾಹಿಯ ವಿವಿಧ ರೂಪಗಳನ್ನು ನಮ್ಮ ದಿನ ನಿತ್ಯದ ಜೀವನದಲ್ಲಿ ಕಾಣುತ್ತಿರುತ್ತೇವೆ. ನಮ್ಮ ಹಸಿವೆ, ಬಡತನ, ನಿರುದ್ಯೋಗ, ಅಜ್ಞಾನ, ಎಲ್ಲವಕ್ಕೂ ಒಂದಲ್ಲ ಒಂದು ರೀತಿಯಲ್ಲಿ ಕಾರಣವಾದ ಈ ಶತ್ರುವಿನ ವಿರುದ್ಧ ಹೋರಾಡಬೇಕು. ಆಗ ಅದು ವಿಶ್ವಶಾಂತಿಗಾಗಿ ನಡೆಸುವ ಹೋರಾಟವೂ ಆಗುತ್ತದೆ," ಎಂದರು.

ಈ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದ ಬಿಹಾರದ ಪ್ರಭಾಶರ್ಮ, ಆಂಧ್ರಪ್ರದೇಶದ ರಾಣಿ, ಪಾಂಡಿಚೇರಿಯ ಸಾಯಿಕುಮಾರಿ, ಮಹಾರಾಷ್ಟ್ರದ ಕಮಲಾ ರಾಮನ್, ಉತ್ತರ ಪ್ರದೇಶದ ಡಾ|| ಹೇಮಲತಾ ಸ್ವರೂಪ, ಬೆಂಗಳೂರಿನ ಶಾರದಾ ನಾಶೀಮಠ್ ಮತ್ತು ಸುಭದ್ರಾ ವೆಂಕಟಪ್ಪ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಥೆರೇಸಾ ಮತ್ತು ಶಾಂತಿ

"ಇಂದು ವಿಶ್ವಶಾಂತಿಯ ವಿನಾಶಕ್ಕೆ ಒದಗಿ ಬಂದಿರುವ ಅತಿದೊಡ್ಡ ವಿಪತ್ತೆಂದರೆ ಗರ್ಭಪಾತ." ಇತ್ತೀಚೆಗೆ ಮದರ್ ಥೆರೇಸಾ ಅಮೆರಿಕೆಯ ಲಾಂಗ್ ಬೀಚ್‌ನಲ್ಲಿ ನುಡಿದದ್ದು ಇದು.

"ನಿಮ್ಮ ಮನೆಯಲ್ಲಿ ಯಾವ ಸ್ತ್ರೀಯೂ, ಪುರುಷನೂ, ಮಗುವೂ, ಜನಿಸದಿರುವ ಮಗುವೂ ಪ್ರೀತಿ ದೊರಕದೆ, ಬೇಡವಾಗದವರಾಗದಂತೆ ನೋಡಿಕೊಳ್ಳಿ."- ನೊಬೆಲ್ ವಿಜೇತೆ ಥೆರೇಸಾ ಶಾಂತಿ ಮೆರವಣಿಗೆಯೊಂದನ್ನು ಉದ್ದೇಶಿಸಿ ಭಾಷಣ ಮಾಡಿದ್ದು ಇದು. "ಇಂದು ತಾಯಿಯರು ತಾವೇ ಗರ್ಭಪಾತ ಮಾಡಿಸಿಕೊಂಡು ಹುಟ್ಟಬಹುದಾಗಿದ್ದ ಮಕ್ಕಳನ್ನು ಕೊಲ್ಲುತ್ತಿರುವ ಕೃತ್ಯ ಘೋರವಾದದ್ದು. ಆದ್ದರಿಂದಲೇ ವಿಶ್ವಶಾಂತಿಗೆ ಗರ್ಭಪಾತ ದೊಡ್ಡ ಅಡೆತಡೆಯಾಗಿದೆ. ಗರ್ಭಪಾತಕ್ಕೆ ಒಳಗಾಗದಿರುವ ಮಾತಾಪಿತೃಗಳಿಗೆ ನಾವು ಕೃತಜ್ಞರಾಗಿರಬೇಕು. ಏಕೆಂದರೆ ಅವರು ನಮ್ಮ ಸಾವಿಗೆ ಕಾರಣವಾಗಿಲ್ಲವೆಂದು." 12,000ಕ್ಕೂ ಹೆಚ್ಚು ಜನರು ಸೇರಿದ್ದ ಸಭೆಯಲ್ಲಿ ಥೆರೇಸಾ ನುಡಿದದ್ದು ಇದು.

ಕಾನೂನುಬದ್ಧ ಗರ್ಭಪಾತಕ್ಕೆ ಹಲವಾರು ವರ್ಷಗಳು ಚಳುವಳಿ ನಡೆಸಿದ ಮಹಿಳಾ ಹೋರಾಟಗಾರರು ಈ ಮಾತುಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು. ಮಹಿಳಾ ಸ್ವಾತಂತ್ರ್ಯಕ್ಕೆ ವರದಾನವಾಗಿರುವ ಗರ್ಭಪಾತ ಆಕಸ್ಮಿಕ, ಅನಪೇಕ್ಷಿತ ಗರ್ಭಧಾರಣೆಯಿಂದ ಸ್ತ್ರೀಯರನ್ನು ಮುಕ್ತಗೊಳಿಸಿದೆಯೆಂಬ ಮಾನಸಿಕ ವಾತಾವರಣವಿರುವ ಸಂದರ್ಭದಲ್ಲಿ ಥೆರೇಸಾರ ಮಾತುಗಳಿಗೆ ಅರ್ಥವೇನಾದರೂ ಇದೆಯೇ ? ಅನಾರೋಗ್ಯಕರ ಶಿಶುವಿನ ಜನನವನ್ನು ನಿವಾರಿಸಲು ಸಾಧ್ಯವಿರುವ ವೈದ್ಯ ವಿಜ್ಞಾನದ ಆವಿಷ್ಕಾರಕ್ಕೆ ಅಣಕದಂತಿದೆ ಥೆರೇಸಾರ ಈ ಮಾತುಗಳು.

ವಿಶ್ವ ಶಾಂತಿಗಾಗಿ ವಿಶ್ವಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳು, ಶಾಂತಿ ಮೆರವಣಿಗೆಗಳು ವಿಶ್ವಶಾಂತಿಯ ಅಗತ್ಯತೆಯನ್ನು ಸಾರುತ್ತಿರುವುದಷ್ಟೇ ಅಲ್ಲ, ಅದರ ಸಾಧನೆಗೆ ಬೇಕಾದ ಮಾನವ ಶಕ್ತಿ, ಸಂಪನ್ಮೂಲಗಳನ್ನು ಸ್ಪಷ್ಟಪಡಿಸುತ್ತದೆ. ವಿಶ್ವ ಶಾಂತಿಯ ಬಗೆಗಿನ ಜಾಗೃತಿ ಮತ್ತು ಅದರ ಕ್ರಿಯಾತ್ಮಕ ಸ್ವರೂಪ ಸಾಧಿಸಲು ಎಷ್ಟು ಕಷ್ಟಸಾಧ್ಯವಾದುದು ಎಂಬುದು ದಿನ ನಿತ್ಯದ ಘಟನೆಗಳಿಂದ ಸಾಬೀತಾಗುತ್ತಿದೆ. ಥೆರೇಸಾ ಇವಕ್ಕೆಲ್ಲಾ ಕುರುಡರೇ ? ಅಥವಾ ಅವರು ಪ್ರತಿಪಾದಿಸುವ ವಿಶ್ವಶಾಂತಿ ಈ ಎಲ್ಲಾ ವಿಷಯಗಳಿಗೂ ಅತೀತವೇ ?

ಮಹಿಳಾದಶಕದಲ್ಲಿ ವಿದ್ಯಾಭ್ಯಾಸ

ಟಿ. ಪಿ. ಸಂಧ್ಯಾ

ಭಾರತದ ಮಹಿಳೆಯರ ಸ್ಥಾನಮಾನವನ್ನು ಕುರಿತಂತೆ ಅಧ್ಯಯನ ನಡೆಸಲು 1975ರಲ್ಲಿ ನೇಮಕವಾದ ಸಮಿತಿಯು ನೀಡಿರುವ ವರದಿಯೇ ಈ ದಶಕದಲ್ಲಿ ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗಳನ್ನು ಕುರಿತ ಅಧ್ಯಯನಕ್ಕೆ ಸಿಗುವ ದಾಖಲೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಈ ಸಮಿತಿಯು ಗುರುತಿಸಿರುವ ಸಮಸ್ಯೆಗಳು: 1. ಅನಕ್ಷರತೆ 2. ಪ್ರಾಥಮಿಕ ಶಿಕ್ಷಣ ದೊರೆಯಲು ಇರುವ ವೈಪರೀತ್ಯಗಳು 3. ದಾಖಲಾತಿಯಾಗದ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಬಿಡುವ ವಿದ್ಯಾರ್ಥಿನಿಯರ ಸಂಖ್ಯೆ 4. ವಿದ್ಯಾಭ್ಯಾಸದ ಪ್ರಗತಿಯಲ್ಲಿರುವ ಅಸಮತೋಲನ 5. ಮಹಿಳಾ ವಿದ್ಯಾಭ್ಯಾಸದ ಧ್ಯೇಯೋದ್ದೇಶವನ್ನು ಕುರಿತಂತೆ ಯೋಜನಾ ಅಧಿಕಾರಿಗಳು ಮತ್ತು ಆಡಳಿತಗಾರರಲ್ಲಿರುವ ಸೈದ್ಧಾಂತಿಕ ಅಸಮತೋಲನ.

ಮಹಿಳಾ ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಈ ಸಮಿತಿಯು ಕೆಲವೊಂದು ಉಪಯುಕ್ತ ಸಲಹೆಗಳನ್ನು ಸೂಚಿಸಿತು. ನಡಿಗೆಯಲ್ಲಿ ಹೋಗಬಹುದಾದಂತಹ ಸನಿಹದ ಶಾಲೆಗಳು, ಚಿಕ್ಕ ತಂಗಿಯರನ್ನು ನೋಡಿಕೊಳ್ಳಬೇಕಾಗಿ ಬರುವುದರಿಂದ ಮನೆಯ ದೊಡ್ಡ ಹೆಣ್ಣು ಮಕ್ಕಳಿಗೆ ಅನುವಾಗುವಂತೆ ಶಾಲೆಯ ಸಮೀಪದಲ್ಲಿ ಶಿಶುಪಾಲನ ಕೇಂದ್ರಗಳು, ಶಾಲೆಗಳಲ್ಲಿ ಹೆಚ್ಚು ಶಿಕ್ಷಕಿಯರ ನೇಮಕ, ಪ್ರೌಢ ಶಾಲಾ ವಿದ್ಯಾಭ್ಯಾಸದವರೆಗೂ ಉಚಿತ ಶಿಕ್ಷಣ, ಮಹಿಳಾ ವಿದ್ಯಾಭ್ಯಾಸದ ಪ್ರಾಮುಖ್ಯತೆಗೆ ವ್ಯವಸ್ಥಿತ ಪ್ರಚಾರ — ಇವೇ ಮೊದಲಾದವಾಗಿದ್ದವು. ಈ ಎಲ್ಲಾ ಸಲಹೆಗಳನ್ನು ಅಂಗೀಕರಿಸಿದ ಭಾರತ ಸರ್ಕಾರದ ಅಧಿಕೃತ ಸಮಿತಿಯು ವಿಶ್ವಸಂಸ್ಥೆಯ ಸಲಹೆಯಂತೆ 1977ರಲ್ಲಿ ಮಹಿಳೆಯರಿಗಾಗಿ ರಾಷ್ಟ್ರೀಯ ಕ್ರಿಯಾ ಯೋಜನೆಯೊಂದನ್ನು ತಯಾರಿಸಿತು.

ಈ ಯೋಜನೆಯು ಮಹಿಳಾ ವಿದ್ಯಾಭ್ಯಾಸದ ಧ್ಯೇಯೋದ್ದೇಶಗಳನ್ನು ಕುರಿತು ಈ ರೀತಿ ರೂಪು ರೇಷೆಯನ್ನು ಸಿದ್ಧಪಡಿಸಿತು :

1) ಮಹಿಳೆಯರು ಸಾಮಾಜಿಕವಾಗಿ ಉತ್ಪನ್ನಕಾರಕ ದುಡಿಮೆಯಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳುವಂತೆ ತರಬೇತಿ ನೀಡುವುದು, ಕುಟುಂಬ ಯೋಜನೆಯ ಬಗ್ಗೆ ಪೂರ್ಣವಾಗಿ ಜಾಗೃತರಾಗುವಂತೆ ಹಾಗೂ ದೇಶದ ಪ್ರಜಾಸತ್ತಾತ್ಮಕ ಮತ್ತು ಅಭಿವೃದ್ಧಿಕಾರಕ ಪ್ರಯತ್ನಗಳೊಂದಿಗೆ ಸಹಕರಿಸುವಂತೆ ಮಾಡುವುದು.

2) ಮಹಿಳೆಯರ ವಿರುದ್ಧ ಸೃಷ್ಟಿಸಲಾಗಿರುವ ಭ್ರಮಾತ್ಮಕ ಪ್ರಪಂಚವನ್ನು ಮುರಿಯುವುದು.

3) ಮಹಿಳೆಯರಿಗೆ ದೊರಕಬಹುದಾದ ನ್ಯಾಯಬದ್ಧ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳ ಬಗ್ಗೆ ಅರಿವು ಮೂಡಿಸಿ, ಅವರಿಗೆ ಉಪಯೋಗವಾಗುವ ರೀತಿಯಲ್ಲಿ, ಅವರ ಬೆಳವಣಿಗೆಗೆ ಅನುವಾಗುವ ರೀತಿಯಲ್ಲಿ ಅವರಿಗೆ ದೊರಕುವಂತೆ ಮಾಡಬೇಕು.

4) ಮಹಿಳೆಯರು ಸ್ವಾವಲಂಬಿಗಳಾಗಿ ಆರ್ಥಿಕ ಸ್ವಾತಂತ್ರ್ಯ ಪಡೆಯಲು ನೆರವಾಗುವುದು.

5) ಸ್ತ್ರೀ ಪುರುಷರ ನಡುವಿನ ಸಮಾನತೆಯ ಬಗ್ಗೆ ಅರಿವು ಮೂಡಿಸಿ ದೇಶದ ಪ್ರಗತಿಯಲ್ಲಿ ಭಾಗವಹಿಸುವಂತೆ ವಿದ್ಯಾಭ್ಯಾಸದ ಮೂಲಕ ಅರಿವು ಮೂಡಿಸುವುದು.

6) ಎಲ್ಲಕ್ಕಿಂತ ಹೆಚ್ಚಾಗಿ ಅವಳ ಪ್ರತಿಭೆ, ಸಾಮರ್ಥ್ಯದ ಅಭಿವ್ಯಕ್ತಿಗೆ, ವ್ಯಕ್ತಿತ್ವದ ಬೆಳವಣಿಗೆಗೆ, ಪಕ್ಷಪಾತವಿಲ್ಲದ ಧೋರಣೆಯನ್ನು ಬೆಳೆಸಿಕೊಳ್ಳುವುದಕ್ಕೆ ಅನುವಾಗುವಂತಹ ವಿದ್ಯಾಭ್ಯಾಸವನ್ನು ಕೊಟ್ಟು ಅವಳು ಮೂಢನಂಬಿಕೆ ಮತ್ತು ಕಂದಾಚಾರಗಳಿಂದ ಮುಕ್ತಳಾಗುವಂತೆ ನೆರವಾಗಬೇಕು.

ಭಾರತ ಸರ್ಕಾರದ ವಿದ್ಯಾಭ್ಯಾಸದ ರಾಷ್ಟ್ರೀಯ ನೀತಿಯ ಕರಡಿನ ಪ್ರಕಾರ ವಿದ್ಯಾಭ್ಯಾಸವು ಕೆಲವು ಕ್ಷೇತ್ರಗಳಲ್ಲಿ ವಿಸ್ತರಿಸಿದೆಯಾದರೂ, ಅಸಮತೆ ಮತ್ತು ಅಸಮತೋಲನವು ಕೆಲವೊಂದು ಕ್ಷೇತ್ರಗಳಲ್ಲಿ ಹಾಗೆಯೇ ಉಳಿದು ಬಿಟ್ಟಿರುವುದನ್ನು ಗುರುತಿಸಿದೆ. ಆ ಕರಡು ಪ್ರತಿಯಲ್ಲಿ ಹುಡುಗಿಯರು, ಪರಿಶಿಷ್ಟ ವರ್ಗ ಹಾಗೂ ಜನಾಂಗದವರು, ಭೂರಹಿತ ಕೃಷಿ ಕಾರ್ಮಿಕರು, ಹಿಂದುಳಿದ ವರ್ಗದವರು, ಕೊಳೆಗೇರಿಯ ಜನರೆಲ್ಲರೂ ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿದ್ದಾರೆಂದು, ಅವರಿಗಾಗಿ "ಅವರ ಸಮಸ್ಯೆಗಳನ್ನು ಅಭ್ಯಸಿಸಿ ಅವರೆಲ್ಲರನ್ನೂ

ವಿದ್ಯಾಭ್ಯಾಸದ ಕಕ್ಷೆಯೊಳಗೆ ತರುವ ಪ್ರಯತ್ನ ನಡೆಸಬೇಕು" ಎಂದಿದೆ.

ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೊಟ್ಟಮೊದಲ ಬಾರಿಗೆ 'ಮಹಿಳೆ ಮತ್ತು ಅಭಿವೃದ್ಧಿ' ಯನ್ನು ಕುರಿತಂತೆ ಒಂದು ಅಧ್ಯಾಯವನ್ನೇ ತೆರೆಯಲಾಯಿತು. ಈ ಅಧ್ಯಾಯದಲ್ಲಿ ಮಹಿಳೆಗೆ ಸಂಬಂಧಪಟ್ಟಂತೆ ವಿದ್ಯಾಭ್ಯಾಸ, ಉದ್ಯೋಗ ಮತ್ತು ಆರೋಗ್ಯವನ್ನು ಕುರಿತಂತೆ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಡೆಸಬೇಕಾದ ಪ್ರಯತ್ನಗಳನ್ನು ಕುರಿತು ಚರ್ಚಿಸಿದೆ.

ಮಹಿಳೆಯರಲ್ಲಿ ಸಾಕ್ಷರತೆ ಮತ್ತು ವಿದ್ಯಾಭ್ಯಾಸವನ್ನು ಉಂಟುಮಾಡಲು ಈ ಯೋಜನೆಯಲ್ಲಿ ಕೆಲವೊಂದು ರಚನಾತ್ಮಕ ಕಾರ್ಯಕ್ರಮಗಳನ್ನು, ಸಲಹೆಗಳನ್ನು ಮುಂದಿಟ್ಟಿದೆ : ಶಾಲೆಗಳಲ್ಲಿ ಹೆಣ್ಣು ಮಕ್ಕಳ ಹೆಚ್ಚಿನ ದಾಖಲಾತಿ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಶಿಕ್ಷಕಿಯರ ನೇಮಕ, ಶಿಕ್ಷಕಿಯರಿಗಾಗಿ ಮಹಿಳಾ ವಸತಿಗೃಹಗಳ ನಿರ್ಮಾಣ, ಶಾಲಾ ಕಾಲೇಜುಗಳಲ್ಲಿ ವೈಜ್ಞಾನಿಕ ಶಿಕ್ಷಣಕ್ಕೆ ಆದ್ಯತೆ, ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಕೃಷಿ, ಪಶುವೈದ್ಯ, ಮೀನುಗಾರಿಕೆ ಮತ್ತು ಆರೋಗ್ಯ ವಿಜ್ಞಾನ ಇವೇ ಮುಂತಾದ ವಿಷಯಗಳಲ್ಲೂ ಮಹಿಳೆಯರು ಹೆಚ್ಚು ಹೆಚ್ಚು ಸೇರ್ಪಡೆಯಾಗುವುದಕ್ಕೆ ಪ್ರೋತ್ಸಾಹಿಸುವುದು, ಮಹಿಳೆಯರ ಅನಕ್ಷರತೆ ಹೆಚ್ಚಿರುವಂತಹ ಸ್ಥಳಗಳಲ್ಲಿ ವ್ಯವಹಾರಕ್ಕೆ ಅಗತ್ಯವಾದಂತಹ ಅಕ್ಷರ ಜ್ಞಾನವನ್ನು ಕಲಿಸುವುದು, ವಿಶೇಷ ಅನೌಪಚಾರಿಕ ವಿದ್ಯಾಭ್ಯಾಸದ ಕಾರ್ಯಕ್ರಮಗಳನ್ನು 15 ರಿಂದ 20 ವರ್ಷದ ಹುಡುಗಿಯರಿಗಾಗಿ ಹಮ್ಮಿಕೊಳ್ಳುವುದು, ಹಿಂದುಳಿದ ಜಾತಿ ಮತ್ತು ವರ್ಗಗಳಿಗೆ ಸೇರಿದ ಹುಡುಗಿಯರಿಗಾಗಿ ಹೆಚ್ಚು ಹಾಸ್ಟೆಲ್‌ಗಳನ್ನು ನಿರ್ಮಿಸುವುದು, ಮಹಿಳೆಯರಿಗೆ ಪ್ರತ್ಯೇಕವಾದ ವಿವಿಧೋದ್ದೇಶದ ಪಾಲಿಟೆಕ್ನಿಕ್ ಶಾಲೆಗಳನ್ನು ತೆರೆಯುವುದರ ಬದಲು ಸ್ತ್ರೀ ಪುರುಷರಿಬ್ಬರಿಗೂ ಅನ್ವಯವಾಗುವ ಸಹ ವಿದ್ಯಾಭ್ಯಾಸದ ಸಂಸ್ಥೆಗಳನ್ನು ತೆರೆಯುವುದು ಉಚಿತವಾದುದು.

ಸಾಧನೆ

ರಾಷ್ಟ್ರೀಯ ಯೋಜನೆಗಳಲ್ಲಿ ನಿರೂಪಿತವಾಗಿರುವ ಸಲಹೆ–ಸೂಚನೆಗಳು, ಕಾರ್ಯಕ್ರಮಗಳು ಏನೇ ಇರಲಿ, ವಾಸ್ತವವಾಗಿ ಅವು ಎಷ್ಟರಮಟ್ಟಿಗೆ ಕಾರ್ಯಗತವಾಗಿವೆ ಎಂಬುದನ್ನು ಅಭ್ಯಸಿಸಿದರೆ ಪರಿಸ್ಥಿತಿ ನಿರಾಶಾದಾಯಕವಾಗಿಯೇ ಇದೆ. ಮಹಿಳಾದಶಕದಲ್ಲಿ ಇಷ್ಟೆಲ್ಲ ಪ್ರಯತ್ನಗಳ ನಡುವೆಯೂ ಸಾಕ್ಷರತೆಯ ಮಟ್ಟ ಕೇವಲ ಶೇಕಡ 6ರಷ್ಟು ಮಾತ್ರ ಹೆಚ್ಚಿದೆ. 1981ರಲ್ಲಿ ಮಹಿಳಾ ಅನಕ್ಷರತೆಯು ಶೇಕಡ 63.75 ಇತ್ತು. ಇದು ವಿವಿಧ ರಾಜ್ಯಗಳಲ್ಲಿ ವಿವಿಧ ಪ್ರಮಾಣದಲ್ಲಿದ್ದರೂ ಮಹಿಳಾ ಅನಕ್ಷರತೆ ಗಾಬರಿ ಹುಟ್ಟಿಸುವಂತಹ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. 1981 ರ ಅಂಕಿಸಂಖ್ಯೆಯ ಪ್ರಕಾರ ಸುಮಾರು ಶೇಕಡ 75ರಷ್ಟು ಮಹಿಳಾ ಸಮುದಾಯ ಅನಕ್ಷರಸ್ಥರು ! ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಜಮ್ಮು ಕಾಶ್ಮೀರದಲ್ಲಿ ಕ್ರಮವಾಗಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಿದೆ. ಶಾಲೆಗಳಲ್ಲಿ ದಾಖಲಾತಿಯ ಅಂಕಿಸಂಖ್ಯೆಗಳಲ್ಲೂ ಹುಡುಗ–ಹುಡುಗಿಯರ ಸಂಖ್ಯೆಯಲ್ಲಿ ಭಾರಿ ಅಂತರವಿದೆ. ಪ್ರಾಥಮಿಕ ಹಂತದಲ್ಲಿ ಶೇಕಡ 55, ಮಾಧ್ಯಮಿಕ ಹಂತದಲ್ಲಿ ಶೇಕಡ 75 ಕ್ಕಿಂತ ಹೆಚ್ಚು, ಪ್ರೌಢಶಾಲಾ ವಿದ್ಯಾಭ್ಯಾಸದಲ್ಲಿ 85 ಕ್ಕಿಂತ ಹೆಚ್ಚು ಹುಡುಗಿಯರು ಶಾಲಾ ವಿದ್ಯಾಭ್ಯಾಸದಿಂದ ಹೊರಗೆ ಬರುತ್ತಿದ್ದಾರೆ. ಉನ್ನತ ವ್ಯಾಸಂಗದ ಮಟ್ಟದಲ್ಲಿ ಕೊಂಚ ಪ್ರಗತಿಯಿದೆಯೆನ್ನಬಹುದಾದರೂ ಸ್ತ್ರೀ ಪುರುಷರ ನಡುವಿನ ಅಂತರ ಹೆಚ್ಚಿದೆ. ಉನ್ನತ ಶಿಕ್ಷಣಕ್ಕಾಗಿ ದಾಖಲಾತಿ ಪದವಿ ಹಂತದಲ್ಲಿ 1981–82 ರಲ್ಲಿ ಶೇಕಡ 27.70 ಇದ್ದು ಸ್ನಾತಕೋತ್ತರ ಹಂತದಲ್ಲಿ ಶೇಕಡ 25.85 ಆಗಿತ್ತು.

ವಿವಿಧ ಸಮಿತಿಗಳು ಮತ್ತು ವರದಿಗಳು ಪಠ್ಯ ಪುಸ್ತಕದಲ್ಲಿ ಸೆಕ್ಸಿಸಂನ್ನು ತೆಗೆದು ಹಾಕಬೇಕೆಂದು ಮತ್ತೆ ಮತ್ತೆ ಹೇಳುತ್ತಾ ಬಂದಿದ್ದರೂ, ಅಂತಹ ಗಮನಾರ್ಹವಾದ ಬದಲಾವಣೆಯೇನೂ ಕಂಡುಬಂದಿಲ್ಲ. ಪಠ್ಯ ಪುಸ್ತಕದಲ್ಲಿ ಹೆಣ್ಣು ಕುರಿತಂತೆ ಪ್ರಸ್ತಾಪಿಸಲ್ಪಡುವ ವಿಷಯಗಳು ಮತ್ತು ಚಿತ್ರಿತವಾಗುವ ವ್ಯಕ್ತಿ ಚಿತ್ರಗಳು ನಮ್ಮ ವಿದ್ಯಾಭ್ಯಾಸ ನೀತಿಯ ಯೋಜಕರ ಮತ್ತು ಆಡಳಿತಗಾರರ ಊಳಿಗಮಾನ್ಯ ಮನೋಭಾವವನ್ನು ಚೆನ್ನಾಗಿ ಪ್ರಕಟಿಸುತ್ತದೆ. 19ನೇ ಶತಮಾನದಲ್ಲಿ ಮಹಿಳೆಯರನ್ನು ಕುರಿತಂತಹ ಎರಡನೆಯ ದರ್ಜೆಯ ಮನೋಭಾವದ ಧೋರಣೆ ಇನ್ನೂ ಅಳಿಸಿ ಹೋಗಿಲ್ಲ. ಮಹಿಳೆಯರಲ್ಲಿ ಕೀಳರಿಮೆಯ ಮೊಳಕೆಯನ್ನು ಬಾಲ್ಯದಿಂದಲೇ ನೆಡುವ ಪ್ರಯತ್ನ ಈ ಪಠ್ಯವಸ್ತುಗಳಲ್ಲಿರುವುದು ಶೋಚನೀಯ ಸಂಗತಿ. ಇದರ ವಿರುದ್ಧ ಸಂಘಟಿತವಾದ, ವ್ಯವಸ್ಥಿತ ಹೋರಾಟ ಆಗಬೇಕಾಗಿದೆ. ●